ಎಸ್. ವಿ. ಪರಮೇಶ್ವರಭಟ್ಟ

ಮೇಘದೂತ

ಎಸ್. ವಿ. ಪರಮೇಶ್ವರಭಟ್ಟ

ಬೆಲೆ ಹತ್ತು ಆಣೆ

ಮುದ್ರಣಕಾರರು:
ಶ್ರೀ ಪಾಂಡುರಂಗ ಮುದ್ರಣಾಲಯ
ತುಮಕೂರು

ಮಾರಾಟದ ಪೂರ್ಣಾಧಿಕಾರಿಗಳು:
ಮಿತ್ರ ಮತ್ತು ಕಂಪೆನಿ
ಪುಸ್ತಕ ವ್ಯಾಪಾರಿಗಳು
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು

ಮೊದಲನೆಯ ಮುದ್ರಣ
೧೯೪೪

ಮುನ್ನುಡಿ

ಇದು ಭಾರತ ವರ್ಷದ ಕವಿಸಾರ್ವಭೌಮನೆಂದು ಕೀರ್ತಿತನಾಗಿರುವ ಕಾಳಿದಾಸನ 'ಮೇಘದೂತ' ಕಾವ್ಯದ ಭಾಷಾಂತರ. ಬ್ರಹ್ಮಶ್ರೀ ಪಂಡಿತರತ್ನಂ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರ 'ಕನ್ನಡ ಮೇಘಸಂದೇಶ'ವನ್ನೂ ಶ್ರೀವರ್ಮಾ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ 'ಕನ್ನಡ ಮೇಘದೂತ'ವನ್ನೂ ಓದಿ ಸಂತೋಷಪಟ್ಟಿರುವ ನಮ್ಮ ಜನ ಈ 'ಮೇಘದೂತ'ವನ್ನೂ ಓದಿ ಸಂತೋಷಿಸುವರೆಂದು ನಂಬಿದ್ದೇನೆ.

ಕಾಳಿದಾಸನ ಕೃತಿರತ್ನಗಳ ಭಾಷಾಂತರಗಳೂ ಅವುಗಳನ್ನು ಕುರಿತ ವಿಮರ್ಶೆಗಳೂ ಎಷ್ಟೆಷ್ಟು ಹೆಚ್ಚಾಗಿ ನಮ್ಮ ಭಾಷೆಯಲ್ಲಿ ಪ್ರಕಟವಾಗುತ್ತವೆಯೋ ಅಷ್ಟಷ್ಟೂ ನಮ್ಮ ನಾಡೂ ನುಡಿಯೂ ಪ್ರವರ್ಧಮಾನಕ್ಕೆ ಬರುವುದು ಎಂದು ನಾನು ಭಾವಿಸಿದ್ದೇನೆ. ಅಲ್ಲದೆ ಕಾಳಿದಾಸನ ಎಲ್ಲ ಕೃತಿಗಳೂ ಹತ್ತು ರೀತಿಯಲ್ಲಿ ಹತ್ತು ಜನರಿಂದ ಪರಿವರ್ತಿತವಾಗಿ ಕನ್ನಡಕ್ಕೆ ಬರುವುದಾದರೆ, ಆ ಕವಿಕುಲ ಗುರುವಿನ ಕಲಾಕೃತಿಗಳ ರಸಗ್ರಹಣದಿಂದಾಗುವ ಆನಂದವೂ ಚಿತ್ತಸಂಸ್ಕಾರವೂ ಕನ್ನಡಿಗರಿಗೆ ಕನ್ನಡದ ಮೂಲಕವಾಗಿಯೇ ದೊರೆಯುವುದಾದರೆ ಆ ಭಾಗ್ಯ ಬಹಳ ದೊಡ್ಡದು ಎಂದು ನಮ್ಮವರು ಪರಿಗಣಿಸುವರೆಂದು ನಾನು ಆಶಿಸಿದ್ದೇನೆ.

ಈ ಪುಸ್ತಕವನ್ನು ಪ್ರಕಟಿಸುವಾಗ ಇದರ ಜೊತೆಯಲ್ಲಿಯೆ 'ಸೌದಾಮಿನಿ' ಎಂಬ ಹೆಸರಿನ ವ್ಯಾಖ್ಯಾನವೊಂದನ್ನೂ ಟಿಪ್ಪಣಿ ಶಬ್ದಕೋಶಗಳ ಅನುಬಂಧವೊಂದನ್ನೂ ಕೊಡುವ ಉದ್ದೇಶವಿತ್ತು. ಕಾಗದದ ಕ್ಷಾಮದ ಜೊತೆಗೆ ಎಲ್ಲ ರೀತಿಯ ಕ್ಷಾಮವೂ ತಲೆಯೆತ್ತುತ್ತಿರುವ ಈಗಿನ ಪರಿಸ್ಥಿತಿಯಲ್ಲಿ ಈ ಉದ್ದೇಶ ಈಡೇರಲಿಲ್ಲವಾಗಿ ವಿಷಾದಿಸುತ್ತೇನೆ.

'ಮೇಘದೂತ'ದ ಕೆಲವು ಪದ್ಯಗಳು 'ಪ್ರಬುದ್ಧಕರ್ಣಾಟಕ'ದಲ್ಲಿಯೂ 'ಕಥಾವಳಿ'ಯಲ್ಲಿಯೂ ಈ ಮೊದಲೆ ಪ್ರಕಟವಾಗಿವೆ. ಅವನ್ನು ಪ್ರಕಟಿಸಿ ಉಪಕಾರ ಮಾಡಿರುವ ಆ ಪತ್ರಿಕೆಗಳ ಸಂಪಾದಕರಿಗೆ ನಾನು ಋಣಿ.

ಪುಸ್ತಕ ಅಚ್ಚಾಗುವುದಕ್ಕೆ ಮೊದಲು ನನ್ನ ಹಿರಿಯರೂ ಸ್ನೇಹಿತರೂ ಇದನ್ನು ಓದಿ ನೋಡಿ, ಓದಿಸಿ ಕೇಳಿ ಪ್ರೋತ್ಸಾಹಿಸಿದ್ದಾರೆ. ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಪೂರ್ವಮೇಘದ ೪೮ನೆಯ ಪದ್ಯದಲ್ಲಿನ 'ಪಾವಕನ' ಎಂಬುದನ್ನು 'ಪಾವಕಿಯ' ಎಂದು ತಿದ್ದಿಕೊಳ್ಳಬೇಕಾಗಿ ಪ್ರಾರ್ಥನೆ.

ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ಶ್ರೀ ಪಾಂಡುರಂಗ ಮುದ್ರಣಾಲಯದ ವ್ಯವಸ್ಥಾಪಕರಿಗೆ ನನ್ನ ಪ್ರೀತಿಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇನೆ.

ಶಿವಮೊಗ್ಗ
೨೫—೪—೧೯೪೪

ಎಸ್. ವಿ. ಪರಮೇಶ್ವರಭಟ್ಟ

ಅರ್ಪಣೆ

ಚಿರಂಜೀವಿ ಸೌಭಾಗ್ಯವತಿ ರಾಜಲಕ್ಷ್ಮಿಗೆ

★

ಮೇಘದೂತವನಿದನು ಮುಗಿಸಿ ತಂದಿಹೆನಿಂದು
ನನ್ನ ನಚ್ಚಿನ ನಲ್ಲೆ ನಿನಗೆ ಮುಡಿಪೆಂದು
ಸಂತಸದೊಳಿದ ಕೊಂಡು ಕೃತಕೃತ್ಯಳೆಂದೆನಿಸಿ
ಅರಳಿಸೆನ್ನೆದೆ ಹೂವನಿಂತೆ ಮನವೊಲಿಸಿ.

ಪೂರ್ವ ಮೇಘ

೧

ಆವನೊರುವಂ ಯಕ್ಷನವಧಾನವಿರದಂದು
ಸ್ವಾಧಿಕಾರವ ಮರೆಯೆ ಮಹಿಮೆಯಳಿದು
ತನ್ನ ಕಾಂತೆಯನಗಲಿ ವಿರಹಭಾರದಿ ಬಳಲಿ
ಭರ್ತೃವಿನ ಶಾಪದಿಂ ವರುಷಕಾಲ
ವಾಸಗೈದಂ ಬಂದು ಜನಕನಂದನೆ ಮಿಂದ
ಪುಣ್ಯತೀರ್ಥಗಳಿರುವ ರಾಮಗಿರಿಯ
ನಿಬಿಡಮೆನೆ ನೆಳಲೀವ ತರುಗಳಾಸರೆಗಳಲಿ
ಉಚಿತಮಾದಾಶ್ರಮಂಗಳಲಿ ನೆಲಸಿ.

೨

ಅಬಲೆಯನು ತಾನಗಲಿ ಕನಕವಲಯವು ಕಳಚಿ
ಬರಿದಾದ ಮುಂಗೈಯೊಳಾ ಕಾಮಿಯು
ಅದುವೆ ಗಿರಿಯೊಳು ನೆಲಸಿ ಕೆಲವು ತಿಂಗಳು ಕಳೆದು
ಆಷಾಢ ಮಾಸದಲಿ ಮೊದಲ ದಿವಸ
ದಂತದಲಿ ದರೆಯನಗೆದೆರಚುತಿರುವಾಟದಲಿ
ತೊಡಗಿರುವ ಆನೆವೊಲು ಕಣ್ಗೆಸೆಯುವ
ಸಾನುದೇಶವನಪ್ಪಿ ಸೊಬಗನಾಂತಿರುವೊಂದು
ಹಿರಿದಾದ ಮೋಡವನು ಕಂಡನಂದು.

೩

ಹಲವಾರು ಆಸೆಗಳ ಮನದೊಳೊಡಮೂಡಿಸುವ
ಆ ಮುಗಿಲ ಮುಂದೆಸೆಯೊಳಿಂತೊ ನಿಂತು
ರಾಜರಾಜಾನುಚರನುರುಳಿಬಹ ಕಂಬನಿಯ
ತಡೆದಂತೆ ಬಹುಪೊಳ್ತು ಚಿಂತಿಸಿದನು.
ಮೇಘದಾಲೋಕನದಿ ಸುಖಿಯಂತರಂಗಮುಂ
ಅನ್ಯಥಾವೃತ್ತಿಯನು ತಾಳ್ವುದೆನಲು
ಕೊರಳ ಬಿಗಿಯಪ್ಪುಗೆಯನಾಶಿಸುವ ಪ್ರಣಯಿಜನ
ದೂರವಿರುವಂತಹರ ಪಾಡದೆಂತು!

೪

ಶ್ರಾವಣವು ಸನ್ನಿಹಿತವೆನೆ ಬಗೆದು ಪ್ರೇಯಸಿಯ
ಜೀವಿತಾಲಂಬನದೊಳರ್ತಿಯಾಗಿ
ತನ್ನ ಕುಶಲವನಾಕೆಗಾ ಮುಗಿಲಮೊಗದಿಂದೆ
ಕಳುಹಿಸುವ ಸಲುವಾಗಿ ಆತನಂದು
ಅದೆತಾನೆ ಅರಳಿರುವ ಕುಟಜ ಕುಸುಮಗಳಿಂದೆ
ಅರ್ಘಮಂ ಕಲ್ಪಿಸುತೆ ಪ್ರೀತನಾಗಿ
ಪ್ರೇಮದೊಳ್ನುಡಿಗಳಿಂದಾ ಮುಗಿಲ ತಾಂ ನುಡಿಸಿ
ಸ್ವಾಗತವ ಬಯಸಿದನು ಹರ್ಷದಿಂದೆ.

೫

ಹೊಗೆಯಿಂದೆ ಉರಿಯಿಂದೆ ಗಾಳಿನೀರುಗಳಿಂದೆ
ರೂಪುಗೊಂಡಿರುವ ಜಡಮೋಡವೆತ್ತ!
ಪಟುವಾದ ಕರಣಗಳ ಪಡೆದಿರುವ ಜೀವಿಗಳು
ಕೊಂಡೊಯ್ವ ಸಂದೇಶ ವಿಷಯವೆತ್ತ!
ಔತ್ಸುಕ್ಯದಿಂದಿದನು ಗಣಿಸದೆಯೆ ಗುಹ್ಯಕನು
ಯಾಚಿಸಿದನಾ ಮುಗಿಲ ಕೃಪಣನಾಗಿ.
ಕಾಮಾರ್ತರಾದವರು ಚೇತನಾಚೇತನದೆ
ಕೃಪಣರೆಂಬುದು ನೋಡೆ ಸಹಜಮಲ್ತೆ!

೬

ಲೋಕದೊಳು ಪೆಸರಾದ ಪುಷ್ಕಲಾವರ್ತಕಗ-
ಳಿಂದೊಗೆದ ವಂಶದವನೆಂದು ಬಗೆವೆ.
ಮಘವಾನನೊಡನಿರುವ ಪ್ರಕೃತಿಪುರುಷನುಮೆಂದು
ಕಾಮರೂಪಿಯುಮೆಂದು ನಿನ್ನನರಿವೆ.
ವಿಧಿವಶದೊಳಿಂತೆ ಬಂಧು ದೂರದೊಳಿರುವ
ನಾಂ ನಿನ್ನನೀರೀತಿ ಬೇಡುತಿರುವೆ.
ಅಧಿಗುಣರ ಬೇಡುವುದು ವಿಫಲವಾದರದೇನು
ಅಧಮರೀವುದಕಿಂತ ಲೇಸೆನಿಸದೆ!

೭

ಸಂತಪ್ತರಾದವರಿಗೆ ನೀನೆ ಶರಣಾಗಿರುವೆ
ಹೇ ಪಯೋದನೆ ಅಂತೆ ನಿನ್ನನೆರೆವೆ.
ಧನಪತಿಯ ಕೋಪದಿಂದಗಲಿ ಬಂದಿರುವೆನ್ನ
ಸಂದೇಶವಿದನೊಯ್ದು ಪ್ರಿಯೆಗೆ ತಿಳಿಸು.
ಅಲ್ಲಿ ಬಹಿರುಪವನದಿ ನೆಲೆನಿಂದ ಪರಶಿವನ
ಶಿರದ ಶಶಿಕಳೆಯ ಬೆಳ್ದಿಂಗಳಿಂದೆ
ಪೊಳೆವ ಹರ್ಮ್ಯಗಳಿರುವ ಯಕ್ಷರೊಡೆಯನು ವಸಿಪ
ಹೆಸರಾದ ಅಲಕೆಯನು ಕುರಿತು ತೆರಳು.

೮

ಪಥಿಕವನಿತೆಯರೆಲ್ಲ ಪತಿಗಳೈತಹರೆಂದು
ವಿಶ್ವಾಸದಿಂದಂದು ನಲಿದು ನಿಂದು
ಮುಂಗುರುಳ ಮೇಲೆತ್ತಿ ಸಡಗರದೆ ನೋಡುವರು
ಪವನಪದವಿಯನೇರಿ ಬರುವ ನಿನ್ನಂ.
ಸಖನೆ ನೀಂ ಮೈದೋರೆ ಪೆರನಾವನೆನ್ನವೊಲು
ತಾನನ್ಯರಾಳಾಗಿ ಬಾಳದವನು
ನೆಮ್ಮದಿಯೊಳಿರುವಂದು ವಿರಹವಿಧುರೆಯ ಸತಿಯ
ಬರಿದೆ ತಾಂ ಕಡೆಗಣಿಸಲೆಂತಾರ್ಪನೊ!

೯

ಅನುಕೂಲ ಮಾರುತನು ಮಂದಮಂದಂ ಸುಳಿದು
ನಿನ್ನ ನೂಗಿಸುತಿರುವನಂದದಿಂದೆ.
ಬಿಂಕದಲಿ ಚಾತಕವು ನಿನ್ನ ಎಡಪಂಕದಲಿ
ದನಿಗೈಯುತಿಹುದೊಲಿದು ಮಧುರವಾಗಿ.
ಬಸುರಿನೊಸಗೆಯ ಸೊಗದ ಪರಿಚಯದೊಳಂದದಿಂ-
ದಾಗಸದೆ ನಿಡುಸರದ ತೋರಣದೊಲು
ಹಾರುವ ಬಲಾಕಗಳು ನಯನ ಸುಭಗನೆ ನಿನ್ನ-
ನನುಸರಿಸಿ ಸೇವಿಸುತೆ ನಲಿವುವಲ್ತೆ!

೧೦

ದಿನದಿನಗಳೆಣಿಕೆಯೊಳೆ ನಿರತಳಾಗಿರುವವಳ
ಏಕಪತ್ನಿಯ ಸತಿಯನವಿಪನ್ನೆಯ
ಭ್ರಾತೃಜಾಯೆಯನವಳ ನೀನವಶ್ಯಂ ಸಖನೆ
ತ್ವರಿತಗಮನದೊಳೈದಿ ನೋಡಲಿರುವೆ.
ಕುಸುಮಕೋಮಲವೆನಿಸಿ ವಿರಹದೊಳು ಬಲುಬಳಲಿ
ಕ್ಷಣಮಾತ್ರದಲಿ ಕಳಚಿ ಬೀಳಲಿರುವ
ಪ್ರಣಯಿಹೃದಯವನದನು ಆಸೆಯೆನುವಾ ಬಂಧ
ವಿಪ್ರಯೋಗದೊಳಿರದೆ ತಡೆದಿರುವುದು.

೧೧

ನಿನ್ನ ಮೊಳಗುಗಳಿಂದೆ ಮಹಿಯೊಳೊಗೆಯೆ ಶಿಲೀಂಧ್ರ
ಬೆಳೆಬರುವ ಧರೆ ಮೆರೆದವಂಧ್ಯೆಯೆನಿಸೆ
ಕೇಳಲಿನಿದಹ ನಿನ್ನ ಮೊಳಗನದನಾಲಿಸುತೆ
ಮಾನಸ ಸರೋವರವ ಪುಗಲೆಳಸುತೆ
ತಾವರೆಯ ಚಿಗುರೆಲೆಯ ಪಾಥೇಯಗಳನಾಂತು
ರಾಜಹಂಸ ಸಮೂಹ ನಭದೊಳಂತೆ
ಕೈಲಾಸದಲ್ಲಿವರಮೊಲಿದು ನಿನ್ನೊಡಗೂಡಿ
ಜೊತೆಯ ದಾರಿಗರಾಗಿ ನೆರವೀವುವು.

೧೨

ಲೋಕವಂದಿತನಾದ ರಾಮನಡಿದಾವರೆಯು
   ಗುರುತಿರುವ ಸಾನುಗಳನಾಂತು ಮೆರೆದು
ನಿನ್ನ ಪ್ರಿಯಸಖನಾಗಿ ಉನ್ನತೋನ್ನತನಾಗಿ
   ನಿಂದ ಗಿರಿಯಿದನಪ್ಪಿ ಕೇಳಿ ತೆರಳು.
ಕಾಲಕಾಲಕೆ ನಿನ್ನ ಸಂಯೋಗವನು ಪಡೆದು
   ಚಿರವಿರಹದಿಂದೊಗೆದ ಕಂಬನಿಯನು
ನಿನಗಾಗಿ ಕಾತರದೆ ಬಿಚ್ಚಬಿಚ್ಚನೆ ಸುರಿಸಿ
   ತನ್ನ ಸ್ನೇಹವನಿಂತು ತೋರುತಿಹುದು.

೧೩

ನಿನ್ನ ಪಯಣದ ಮಾರ್ಗವೆಂತಿರುವುದೆಂಬುದನು
   ಸಂಪೂರ್ಣಮೆನಲೊರೆವೆ ಕೇಳು ಜಲದ!
ಬಳಿಕ ಮನವೊಗುವಂತೆ ಸಂದೇಶವನು ಪೇಳ್ವೆ-
   ನದನು ಕಿವಿಗೊಟ್ಟಾಲಿಸೆನ್ನ ಸಖನೆ!
ಬಳಿಕ ನೀಂ ದಾರಿ ನಡೆ ಬಳಬಳಲಿ ಬಸವಳಿಯೆ
   ಗಿರಿಶಿಖರದೆಡೆಗಳಲಿ ಪದವನೂರಿ,
ಕಡುದೀನನಾದಂದು ನಿರ್ಝರದ ಸ್ರೋತಗಳ
   ನಿರ್ಮಲೋದಕಗಳಂ ಪಾನಗೈದು.

೧೪

ಪರ್ವತಶೃಂಗಮನೆ ಪವನನಪಹರಿಸುತಿಹ-
   ನೆಂದೆಣಿಸಿ ಸಿದ್ಧ ಮುಗ್ಧಾಂಗನೆಯರು
ಚಕಿತ ಚಕಿತೆಯರಾಗಿ ಮೊಗವೆತ್ತಿ ನೋಡುತಿರೆ
   ವೀಕ್ಷಣೋತ್ಸಾಹದೊಳು ಮೋದಗೊಂಡು
ಮಾರ್ಗದೊಳು ಸಂಧಿಸುವ ಘೋರ ದಿಙ್ನಾಗಗಳ
   ಹಸ್ತಾವಲೇಪಗಳ ಪರಿಹರಿಸುತೆ
ಸರಸ ನಿಚುಳಗಳಿರುವ ಈ ತಾಣದಿಂದೆ ನೀಂ
   ಮುಂದುತ್ತರಾಭಿಮುಖಿಯಾಗಿ ತೆರಳು!

೧೫

ವಿವಿಧ ಮಣಿರತ್ನಗಳ ಕಾಂತಿ ಸಮ್ಮಿಶ್ರಣದೆ
ಪೊಳೆವ ದೇವೇಂದ್ರಧನು ಕಣ್ಗೊಳಿಸುತೆ
ನಿನ್ನ ವೈತೊಡವೆನಿಸಿ ಮುಂಗಡೆಯು ಹುತ್ತದಿಂ-
ದೊಡಮೂಡಿ ನಿಂದಂದು ಸೊಬಗಿನಿಂದೆ
ಸ್ಫುರಿತ ಕಾಂತಿಯನಾಂತ ನವಿಲುಗರಿಗಳ ತಳೆದು
ಶೋಭಿಸುವ ಗೋಪಾಲಕೃಷ್ಣನಂತೆ
ನೀಲಿಬಣ್ಣದ ನಿನ್ನ ತನುವದರ ಕಾಂತಿಯುಲಿ
ಮಿಗಿಲಾದ ಶೋಭೆಯುಂಪೆಸೆಯುತಿಹುದು!

೧೬

ಭೂವಿಲಾಸಂಗಳಲಿ ಅನಭಿಜ್ಞರೆನಿಸಿರುವ
ಜಾನಪದವಧುಗಳಾನಂದದಿಂದೆ
ಪ್ರೀತಿ ತುಂಬಿದ ತಮ್ಮ ಲೋಚನಂಗಳ ತೆರೆದು
ನೀನೆ ಕೃಷಿಗಾಧಾರನೆಂದು ಬಗೆದು
ಕಾತರದೆ ನೋಳ್ಪರದನಾಸ್ವಾದನಂಗೈದು
ಅದೆ ಉತ್ತ ಹೊಲದ ನರುಗಂಪನುಗುವ
ಮಾಲಮನ್ನೇರಿ ನಸುಪಡುವಲಿಗೆ ನೀಂ ಪೋಗಿ
ತಿರುಗಿ ತೆರಳುತ್ತರಕೆ ತೀವ್ರವಾಗಿ.

೧೭

ಜಲಧಾರೆಗಳ ಸುರಿಸಿ ಕಾಳ್ಕಿಚ್ಚನುಪಶಮಿಸಿ
ಎಸಗಿದುಪಕಾರದಿಂದಾಮ್ರಕೂಟ.
ದಾರಿ ನಡೆದಾಯಸದೆ ಬಳಲಿರುವ ನಿನ್ನ ತಾಂ
ತಳೆವುದೈ ತಲೆಮೇಲೆ ಸೊಗಸಿನಿಂದೆ.
ಕ್ಷುದ್ರನಾದಾತನುಂ ಆಶ್ರಯವನಾಶಿಸುವ
ಗೆಳೆಯನೈತರುವಂದು ತನ್ನ ಬಳಿಗೆ
ಜನನ ಉಪಕಾರಗಳ ನೆನೆದು ಮೊಗದಿರುಹನೆನೆ
ಉನ್ನತರ ಬಗೆಯನಿನ್ನೆಂತು ಪೇಳ್ವೆಂ!

೧೮

ಕಳಿವಣ್ಗಳಿಡಿದಿರುವ ಕಾನನಾಮ್ರಗಳಿಂದೆ
  ಕವಿದ ಸಾನುಗಳಿರುವ ಆಮ್ರಕೂಟ
ಶೈಲದಿಂ ನುಸ್ಸೈಸೆವ ವೇಣಿವೋಲಿಹ ನೀನು
  ಅದರ ಶಿಖರಾಗ್ರವನು ಏರಿದಂದು
ನಡುವೆ ಕಪ್ಪಾಗಿರುತೆ ಉಳಿದೆಲ್ಲ ಬೆಳ್ಪೆಸೆವ
  ತಿರೆವೆಣ್ಣ ತೋರವೊಲೆವೆಳಗಿನಂತೆ
ಅಮರದಂಪತಿಗಳಿಂದಾಲೋಕನಾರ್ಹನೆನೆ
  ಶೋಭಿಸುವೆ ನೋಡಲತಿ ಸುಭಗನೆನಿಸಿ.

೧೯

ವನಚರವಧೂಜನಗಳಂದದಲಿ ವಿಹರಿಸುವ
  ವನ್ಯಕುಂಜಗಳೆಡೆಯೊಳೊಲಿದು ನಿಂದು
ನೀರು ಬರಿದಾಗಿರಲು ಬೇಗಬೇಗನೆ ಸಾಗಿ
  ಅದರಾಚೆ ದಾರಿಯನು ದಾಂಟಿದಂದು
ಮಾತಂಗದಂಗದೊಳು ವಿರಚಿಸಿಹ ಚಿತ್ರತರ
  ಭಸ್ಮರೇಖಾವಳಿಯು ಹೋಲುತಿರುವ
ಹಳ್ಳದಿಣ್ಣೆಗಳಿರುವ ವಿಂಧ್ಯಪಾದದ ಬಳಿಯೆ
  ಹಸರಿಸಿಹ ನರ್ಮದೆಯು ನೋಡಲಿರುವೆ.

೨೦

ಮಳೆಗರೆದು ಬರಿದಾಗೆ ಮುಂದೆ ನೀಂ ಕಟುವಾದ
  ವನಗಜದ ಮದಜಲದಿ ಪರಿಮಳಿಸುತೆ
ನೇರಳೆಯ ಪೊದೆಯಿಂದೆ ಮಂದಗಮನಮನಾಂತ
  ನರ್ಮದೆಯ ತೋಯವನು ಮೊಗೆದು ತೆರಳು.
ಇಂತು ಅಂತಸ್ಸಾರನಾದ ನಿನ್ನನು ಘನನೆ
  ಚಲಿಸಲನಿಲನು ಶಕ್ತನಾಗನಲ್ತೆ!
ಪೂರ್ಣತೆಯೆ ಗೌರವಕೆ ಕಾರಣವು; ರಿಕ್ತತೆಯು
  ದೆಸೆಯಿಂದೆ ಸರ್ವಮುಂ ಲಘುವೆನಿಪುದು.

೨೧

ಅರೆಬೆಳೆದ ಕೇಸರದ ಕಂದುಹಸುರಿನಬಣ್ಣ-
ದಿಂದೆಸೆವ ನೀಪಗಳ ನೋಡಿ ನಲಿದು
ಜೌಗುನೆಲದಲಿ ಬೆಳೆದ ಮೊದಲಮುಗುಳುಗಳೊಗೆದ
ಎಳೆಯ ಕಂದಳಿಗಳನು ತಿಂದು ನಲಿದು
ವನ್ಯದೇಶಗಳಿಂದಲಧಿಕಸೌರಭವುಗುವ
ನೀರುಂಡ ತಿರೆಯ ಹೊಸಕಂಪು ಮೂಸಿ
ಸಂಚರಿಪ ಸಾರಂಗ ನಿವಹ ತಾಂ ಸೂಚಿಪ್ಪುದು
ಹೊಸನೀರ ಹನಿಗರೆವ ನಿನ್ನ ಪಥಮಂ.

೨೨

ನೀರ್ವನಿಯ ಹಿಡಿಪ್ಪೊಂದು ಚತುರತೆಯನಾಂತಿರುವ
ಚಾತಕಂಗಳ ನೋಡಲೆಳಸಿದಂದು
ಪಂಕ್ತಿಪಂಕ್ತಿಯೊಳೆಸೆದು ಹಾರುವ ಬಲಾಕಗಳ-
ನೊಂದೆರಡು ಎಂದೆಣಿಸಿ ತೋರಲಿಂದು
ರಮಣಿಯರನೊಡಗೂಡಿ ಸಿದ್ಧರಾಗಸವೊಳಿರೆ
ಮೇಲೆ ನೀಂ ಮೊಗವೋರಿ ಗುಡುಗಿದಂದು
ಸೋತ್ಕಂಠ ಸಹಚರಿಯರಾಲಿಂಗನಂ ಪಡೆದು
ನಿನ್ನನಭಿವಂದಿಸುವರಂದದಿಂದೆ.

೨೩

ನನ್ನ ಮನದಿನಿಯಳನು ಸಂತವಿಪ ಸಲುವಾಗಿ
ಸಡಗರದೆ ನೀ ಪೋಗಲೆಳಸಿದಂದು
ಮಲ್ಲಿಗೆಯ ಕಂಪುಗುವ ಮಲೆಮಲೆಗಳೆಡೆಗಳಲಿ
ಬರಿದೆ ಕಾಲವ ಕಳೆವೆಯೆಂದು ಬಗೆವೆ.
ಕಣ್ತುಂಬಿ ಸೂಸುತಿರುವಾನಂದಬಾಷ್ಪದಿಂ
ಕೇಕಾರವಂಗೈದು ಸ್ವಾಗತಿಸುವ
ನವಿಲುಗಳ ಆತಿಥ್ಯವನು ಪಡೆದು ಮೇಣೆಂತೊ
ದ್ರುತಗತಿಯೊಳಲ್ಲಿಂದೆ ತೆರಳಲೆಳಸು.

೨೪

ತೊಡೆಯೊಡೆದು ತಿನೆಬಿರಿದ ಕೇದಗೆಯ ಗರಿಗಳಿಂ
   ಬೆಳ್ಪಾಂತ ಉಪವನದ ಬೇಲಿಯಿಂದೆ
ಗೃಹಬಲಿಯ ಭುಂಜಿಸುವ ಪಕ್ಷಿಸಂಕುಲವೊಲಿದು
   ಗೂಡುಗಟ್ಟುತಲಿರುವ ಮರಗಳಿಂದೆ
ನೀಲಿಬಣ್ಣವನಾಂತ ಕಳಿವಣ್ಗಳಿಡಿದಿರುವ
   ಕರಮೆಸೆವ ನೇರಿಳೆಯ ಬನಗಳಿಂದೆ
ಕೆಲದಿನವೆ ತಂಗಿರುವ ಹಂಸವಸತಿಗಳಿಂದೆ
   ದಾಶಾರ್ಣದೇಶ ಮುಂದೆಸೆವುದಲ್ಲಿ.

೨೫

ಲೋಕದೊಳು ಹೆಸರಾದ ವಿದಿಶಾಭಿಧಾನದಾ
   ರಾಜಧಾನಿಯನದನು ಸೇರಿ ನೀನು
ಭ್ರೂಭಂಗದಂತಿರುವ ಚಲಿಸುವಲೆಗಳೆಸೆದು
   ಅಧರದಂತಿನಿದಾದ ಜಲವ ತಳೆದು
ಮೆರೆವ ವೇತ್ರಾವತಿಯನಿರದೆ ನುಡಿಸುವವೋಲು
   ನಸುಬಾಗಿ ಮೃದುಮಧುರ ಮೊಳಗಿನಿಂದೆ
ಪಡವೆಡೆಯೊಳದರ ಸವಿಯುದಕವನು ಕುಡಿವಂದು
   ಕಾಮುಕನ ಸಂಪೂರ್ಣ ಫಲವ ಪಡೆವೆ.

೨೬

ಪಣ್ಯವನಿತಾಜನರ ಸುರತ ಪರಿಮಳಮುಗುವ
   ಸುಂದರ ಶಿಲಾವೇಶ್ಮನಿವಹದಿಂದೆ
ನಾಗರಿಕರುದ್ದಾಮ ಯೌವನೋತ್ಕರ್ಷವನು
   ಆವ ಪರ್ವತ ಜಗಕೆ ಸಾರುತಿಹುದೊ
ಪ್ರೌಢಪುಷ್ಪಗಳೆಸೆವ ನೀಪವೃಕ್ಷಗಳಿಂದ-
   ಲಾವ ಪರ್ವತ ಜನರ ಮನಸೆಳೆಯುತೆ
ನಿನ್ನ ಸಂಸ್ಪರ್ಶದಲಿ ಪುಳಕಗೊಂಡವೊಲಿಹುದೊ
   ಅದುವೆ ನೀಚೈರ್ಗಿರಿಯೊಳಲ್ಲಿ ನೆಲಸು.

೨೭

ಬಳಿಕ ಮುಂದುತ್ತರಿಸಿ ವನನದೀತೀರದೊಳು
ಉಪವನದ ಮಲ್ಲಿಗೆಯ ಮೊಗ್ಗೆಗಳಿಗೆ
ಹೊಸಮಳೆಯ ನೀರ್ವನಿಗಳಭಿಷೇಚನಂಗೈದು
ಬೆಮರಿಳಿವ ಕದಪುಗಳನೊರಸುವಂದು
ಕಿವಿಯ ನೈದಿಲೆ ಹೂವು ಬಾಡಿ ಕೆಳಗುದುರುತಿರೆ
ಪೂದಿರಿಯುವಬಲೆಯರ ಮೊಗದ ಮೇಲೆ
ಕ್ಷಣ ಮಾತ್ರ ಪರಿಚಯದೆ ನೆರಳನಾಸರೆಯಾಗಿ
ಮತ್ತೆ ಮುಂದುತ್ತರಕೆ ತೆರಳು ಸಖನೆ.

೨೮

ಉತ್ತರದ ದೆಸೆಗೆಂದು ಪಯಣ ಬೆಳಸುವ ನಿನಗೆ
ಉಜ್ಜಯಿನಿಯಾ ದಾರಿ ಬಳಸಾದರುಂ
ಅಲ್ಲಿನ ಮಹೋತ್ತುಂಗ ಸೌಧದರಮನೆಗಳಲಿ
ಸ್ನೇಹವಿರಚಿತನೆನಿಸಿ ಮೊಗದಿರುಹದೆ
ಬಳ್ಳಿಮಿಂಚಿನ ಬೆಳಕಿಗಿರದೆ ಭಯದಿಂ ಬೆದರಿ
ಚಲಿಸುತಿರುವಾ ನಗರದಂಗನೆಯರ
ಚಕಿತ ಲೋಲಾಪಾಂಗ ಲೋಚನಂಗಳ ನೋಡಿ
ನೀನಲ್ಲಿ ರಮಿಸದಿರೆ ವಂಚಿತನಹೆ.

೨೯

ಅಲೆಗಳುಲ್ಲೋಲದಲಿ ಕಲರವಂಗೈಯುತಿಹ
ಹಕ್ಕಿಗಳ ಸಾಲಿನೊಡ್ಯಾಣದಿಂದೆ
ಘುಮುಘುಮುಕಿ ಹರಿವಂದು ಸುಭಗಮೆನೆ ತೋರುತಿಹ
ಆವರ್ತವೆನುವ ಸುಳಿನಾಭಿಯಿಂದೆ
ಮೆರೆವ ನಿರ್ವಿಂಧ್ಯೆಯನು ಬಳಿಸಾರ್ದು ಸಂತಸದೆ
ಅಲ್ಲಿ ರಸಲೋಲನೆನೆ ಸುಖಿಸು ಸಖನೆ.
ವನಿತೆಯರಿಗಿನಿಯರೊಳು ಒಲವ ಬೇಡುವುದರಲಿ
ವಿಲಸನವೆ ತಾನಲ್ತೆ ಮೊದಲ ನುಡಿಯು.

೩೦

ವೇಣಿವೊಲು ತೆಳುವಾಗಿ ಹರಿವ ನೀರ್ವೊನಲಿಂದೆ
   ಕೃಶಳಾಗಿ ತೋರುವಾ ನಿರ್ವಿಂಧ್ಯೆಯು
ಪಡವೆಡೆಯ ತರುಗಳಿಂದುದುರಿ ಬೀಳುತಲಿರುವ
   ಹಣ್ಣೆಲೆಗಳಿಂದೆ ತಾಂ ಬೆಳ್ಪನಾಂತು
ತನ್ನ ವಿರಹವ್ಯಥೆಯ ದಾರುಣಾವಸ್ಥೆಯಲಿ
   ನಿನ್ನ ಸೌಭಾಗ್ಯವನೆ ಸೂಚಿಸುತ್ತಿರೆ
ಸಂಗಮದ ಸೊಗದಿಂದಲಾ ಸಿಂಧು ವೈತುಂಬು-
   ವಂದದೊಳು ನೀನವಳ ಮೋದಗೊಳಿಸು.

೩೧

ವತ್ಸರಾಜನ ಕಥೆಯನರಿತ ಕೋವಿದರಿರುವ
   ಊರ ಹಿರಿಯರ ನೆಲೆಯನಾವಂತಿಯ
ಹಿಂದಿರಿಸಿ ಸಿರಿಯ ಹರಪಿನ ನೆಲೆಯು ತಾನೆನಿಸುವ
   ಉಜ್ಜಯಿನಿಯನು ಕುರಿತು ತೆರಳೆ ಮುಂದೆ
ತಮ್ಮ ಸುಚರಿತ ಫಲವು ಮುಗಿದು ಬರುತಿರುವಂದು
   ದೇವಲೋಕದ ಜನರು ತಿರುಗಿ ಬಂದು
ಸುಕೃತ ಶೇಷಗಳಿಂದ ಧರೆಗೆ ತಂದಿಳಿಸಿರುವ
   ದಿವದೊಂದು ಖಂಡವೆನೆ ಕಂಗೊಳಿಪುದು.

೩೨

ಅಲ್ಲಿ ಶಿಪ್ರಾನದಿಯ ಮೇಲೆ ಬೀಸುವ ಗಾಳಿ
   ಉದಯಕಾಲದೊಳುಲಿವ ಸಾರಸಗಳ
ಮದಕಲದ ಕೂಜಿತವ ನಿಡಿದಾಗಿ ಬೆಳೆಯಿಸುತೆ
   ಬಿರಿದ ತಾವರೆಯುರಳ ಕಂಪನಾಂತು
ಭೋಗದಭಿಲಾಷೆಯಲಿ ಚಾಟುವಚನವ ನುಡಿದು
   ಕಾಮಿನಿಯ ಸಂತವಿಸುವಿನಿಯನಂತೆ
ಅಂಗನೆಯರೊಡಲಿಗನುಕೂಲ ಭಾವದಿ ಸುಳಿದು
   ಜೇಟಿನಾಯಾಸವನು ನೀಗಲಿಹುದು.

೩೩

ತಾರಹಾರಗಳೆನಿತೊ ತರಳ ಘುಟಿಕಗಳೆನಿತೊ
ಶಂಖ ಶುಕ್ತಿಗಳೆನಿತೊ ಕೋಟಿ ಕೋಟಿ
ಎಳೆಹುಲ್ಲಿನಂತಿರುವ ಹಸುರುಬಣ್ಣದ ಕಾಂತಿ
ಕುಡಿಯೊಡೆದು ಹೊಳೆವ ಮರಕತಗಳೆನಿತೊ!
ಹವಳಗಳ ಹರಳೆನಿತೊ ಉಜ್ಜಯಿನಿಯಂಗಡಿಯ
ಬೀದಿಗಳ ನೋಡಿದರೆ ಹೊಳೆವುದಂದು
ಮುನ್ನೀರು ತನ್ನೆಲ್ಲ ರತ್ನಗಳನಿಲ್ಲಿರಿಸಿ
ತಾಂ ಬರಿಯ ನೀರನಿಧಿಯಾದುದೆಂದು.

೩೪

ಇದುವೆ ತಾಣದೊಳಂದು ಪ್ರದ್ಯೋತಪುತ್ರಿಯನು
ಬಂದು ಅಪಹರಿಸಿದನು ವತ್ಸರಾಜಂ.
ಮೇಣಿದುವೆ ತಾಣದಲಿ ಆನರೇಂದ್ರನದೆನುವ
ಹೇಮತಾಳದ್ರುಮದ ವನವಿರ್ದುದು.
ಮತ್ತಿದುವೆ ತಾಣದಲಿ ನಲಗಿರಿಯು ಮದವೇರಿ
ಕಂಬವನು ಕಿತ್ತೆಸೆದು ಹಾರಾಡಿತು.
ಈ ತೆರನ ಕತೆಗಳನು ಹೇಳುತ್ತ ಬಲ್ಲ ಜನ-
ರಾಗಂತುಕರನಲ್ಲಿ ಮುದಗೊಳಿಪರು.

೩೫

ಎಳೆಹಸುರು ಬಣ್ಣದಲಿ ದಿನಕರನ ತೇಜಗಳ
ಹೋಲುತಿಹ ವಾಹಕಗಳಿರುವುವಲ್ಲಿ.
ಶೈಲದಂತುತ್ತುಂಗವೆನಿಸಿದಾನೆಗಳಲ್ಲಿ
ನಿನ್ನವೊಲು ಮದಜಲದ ಮಳೆಗರೆವುವು.
ಸಮರ ಸಂರಂಭದಲಿ ದಶಮುಖನಿಗೆದುರಾಗಿ
ಚಂದ್ರಹಾಸದೊಳಾದ ಕಲೆಗಳಿಂದೆ
ಆಭರಣಕಾಂತಿಗಳ ಮರೆಸಿ ಮೆರೆವಂತಿರುವ
ಯೋಧಾಗ್ರಗಣ್ಯರಿಹರಲ್ಲಿ ನೆಲಸಿ.

೩೬

ಜಾಲಮಾರ್ಗದಿನೊಗೆವ ಕೇಶಸಂಸ್ಕಾರದಿನಿ-
ಧೂಪದಿಂದೊಡಗೂಡಿ ಪುಷ್ಟನಾಗಿ
ಬಂಧುವೆನುವಾದರದೆ ಗೃಹಮಯೂರಗಳೀವ
ನೃತ್ತೋಪಹಾರದಿಂ ತುಷ್ಟನಾಗಿ
ಕುಸುಮ ಸೌರಭವುಗುವ ಲಲಿತವನಿತಾಪಾದ-
ರಾಗಾಂಕಿತಂಗಳಿಹ ಹರ್ಮ್ಯಗಳಲಿ
ಉಜ್ಜಯಿನಿಯೈಶ್ವರ್ಯ ಲಕ್ಷ್ಮಿಯನು ನೋಡುತ್ತೆ
ದಾರಿ ನಡೆದಾಯಸವ ನೀಗಲಿರುವೆ.

೩೭

ಭರ್ತೃವಿನ ಕಂಠದೊಲು ಛವಿಯಾಂತನಿವನೆಂದು
ನಿನ್ನ ನೋಡುತ ನಲಿಯೆ ಪ್ರಮಥಗಣವು
ಜಲಕೇಳಿಯೊಳು ಮೆರೆವ ಯುವತಿಯರ ಮೀಹದಿಂ
ಮಗಮಗಿಪ ಗಂಧವತಿಯತ್ತಣಿಂದೆ
ನೈದಿಲೆಯ ನರುಗಂಪಿನೊಡಗೂಡಿ ಸುಳಿದು ಬಹ
ತಂಗಾಳಿಯಲಿ ತೊನೆವ ಉಪವನದೆಡೆ
ತೆರಳು ನೀಂ ತ್ರಿಭುವನಕೆ ಗುರುವಾದ ಚಂಡೀಶ
ನೆಲಸಿರುವ ಪುಣ್ಯಮಯಧಾಮದೆಡೆಗೆ.

೩೮

ನೀನಲ್ಲಿ ಮೆರೆಯುವ ಮಹಾಕಾಳಮಂದಿರವ
ಬೇರಾವ ವೇಳೆಯಲಿ ಸಾರಿರ್ದರುಂ
ನಯನ ದೇಶವ ಮೀರಿ ದೂರದ ದಿಗಂತದಲಿ
ಸೂರ್ಯ ಮುಳುಗುವವರೆಗೆ ಅಲ್ಲೆ ನೆಲಸಿ
ಲೋಕವಂದಿತನಾದ ಶೂಲಿಯಾರಾಧನೆಗೆ
ಗುಡುಗುಗಳ ದನಿಗೈದು ಪಟಹವಾಗು.
ಗಂಭೀರತರವಾದ ನಿನ್ನ ಗರ್ಜಿತಗಳಿಗೆ
ಮುಂದೆ ನೀಂ ಸಂಪೂರ್ಣ ಫಲವ ಪಡೆವೆ.

೩೯

ನೃತ್ಯಸೇವಾಭರದೊಳಡಿಯನೆತ್ತಿಡುವಂದು
ಕಟಿಯ ಕಾಂಚೀದಾಮ ಝಣಝಣರೆನೆ
ರತ್ನವರ್ಣಚ್ಛವಿಯ ವಳಿಯ ಚಾಮರ ಮಿನುಗೆ
ಲೀಲೆಯಿಂ ಪಿಡಿದದನು ಬೀಸುವಂದು
ಕ್ಲಾಂತ ವೇಶ್ಯಾಜನದ ನಖಪದಕೆ ಸುಖಪೀವ
ಮೊದಲ ಮಳೆಹನಿಗಳನು ನೀನು ಸುರಿಯೆ
ಮಧುಕರ ಶ್ರೇಣಿವೊಲು ನಿಡಿದಾದಪಾಂಗಗಳ
ನಿನ್ನ ಕಡೆಗೆಸೆಯುವರು ಪ್ರೀತಿಯಿಂದೆ.

೪೦

ಆ ಬಳಿಕ ಶಿವನ ನಿಡುತೋಳುಗಳ ತರುವನವ
ಮಂಡಲಾಕಾರದಲಿ ಬಳಸಿ ನಿಂದು
ಅಭಿನವ ಜಪಾಕುಸುಮವೆಂತಂತೆ ಕೆಂಪಾಗಿ
ಬೈಗುವೆಳಗನು ತಳೆದು ಸುಭಗನಾಗಿ
ಉದ್ವೇಗ ಶಮನಗೊಳೆ ನಿಶ್ಚಲಾಕ್ಷಿಗಳಿಂದೆ
ಶಿವೆ ನಿನ್ನ ಭಕ್ತಿಯನ್ನೀಕ್ಷಿಸುತಿರೆ
ನಾಟ್ಯದಾರಂಭದಲಿ ಪಶುಪತಿಯ ಆರ್ದ್ರಗಜ-
ಚರ್ಮಾಭಿಲಾಷೆಯನು ನೀಗಲಿಳಿಸು.

೪೧

ನೋಟವನು ತಡೆಗೈದು ಕವಿವ ಕಗ್ಗತ್ತಲೆಯ
ರಾಜಬೀದಿಯೊಳಲ್ಲಿ ಉಜ್ಜಯಿನಿಯ
ಯೋಷಿತೆಯರಂದಮಿಗೆ ರಮಣವಸತಿಯ ಕುರಿತು
ಸಾನುರಾಗದಿ ತೆರಳಲನುವಾಗಿರೆ
ಕನಕ ನಿಕಷದ ತೆರದಿ ಹೊಳೆವ ಸೌದಾಮಿನಿಯ
ಬೆಳಕಿನಿಂ ನೀನವರ ದಾರಿ ತೋರು.
ಮೊಪಲೆ ಭಯಚಕಿತರಹ ಯೋಷಿತೆಯರವರ ನೀಂ
ಮಳೆಗರೆದು ಮೊಳಗಿರಿದು ಬೆದರಿಸದಿರು.

೪೨

ಚಿರವಿಲಸನೋದ್ವೇಗ ಭರದಿಂದೆ ಕಡುಬಳಲಿ
 ಖೇದಗೊಳೆ ನಿನ್ನ ಸತಿ ಸೌದಾಮಿನಿ
ಸುಪ್ತ ಪಾರಾವತಗಳಿರುವ ಸೌಧಾಗ್ರದಲಿ
 ನೀನುಮಾಯಾಸವನು ನೀಗಲೆಂದು
ಇರುಳು ಸೂಕಲು ತಂಗಿ ನೇಸರುದಯಿಸುವಂದು
 ಉಳಿದ ದಾರಿಯು ಕುರಿತು ತೆರಳು ಮುಂದೆ.
ಕೈಕೊಂಡ ಸಖರರ್ಥ ಕೃತ್ಯಗಳನೆಸಗಲಿರೆ
 ಸಾವಕಾಶಂಗೈವುದುಚಿತಮಲ್ತು.

೪೩

ನೇಸರುದಯಿಸುವಂದು ಕಾಮಿಜನರ್ಕೈತಂದು
 ಮುನಿಸಿನಿಂ ಮೊಗದಿರುಹಿದಂಗನೆಯರ
ಕಂಬನಿಗಳಂ ತೊಡೆದು ಸಂತವಿಪ ಸಮಯವವು
 ನೀನಂತೆ ದಿನಕರನ ತಡೆಯಬೇಡ.
ಪದುಮಲತೆಗಳ ಸೋಂಕಿ ಕಮಲವದನವನೆತ್ತಿ
 ಹಿಮಕಣದ ಕಣ್ಣೀರನೊರಸಲೆಂದು
ಹಿಂದಿರುಗಿ ಬರುತಿರುವ ದಿನಕರನ ಕಿರಣಗಳ
 ತಡೆದಂದು ಅವನುರಿದು ಕೋಪಗೊಳುವಂ.

೪೪

ವಿಮಲಾಂತರಂಗದೊಲು ನಿರ್ಮಲೋದಕವಿರಲು
 ಗಂಭೀರೆ ತಾನಿರಲು ಪ್ರೇಯಸಿವೊಲು
ಛಾಯಾತ್ಮನಾದರೂ ಪ್ರಕೃತಿಸುಭಗನೆ ನಿನ್ನ-
 ನಾಕೆ ತಿಳಿನೀರಿನಲಿ ತಳೆದಿರುವಳು.
ಅದುವೆ ಕಾರಣದಿಂದೆ ಸಂಯಮಿಯವೋಲಿರದೆ
 ಕುಮುದದೊಲು ಬಿಚ್ಚಿಸೆವ ಗಂಭೀರೆಯ
ಚಟುಲತರ ಶಫರಗಳ ಚಂಚಲೋದ್ವರ್ತನಗ-
 ಳಾಲೋಕಗಳನೆಂತು ವ್ಯರ್ಥಗೈವೆ.

೪೫

ತಟನಿತಂಬವದಿನಿತು ತೆರೆದು ತೋರುವ ತೆರದಿ
ವಾನೀರ ಶಾಖೆಗಳ ಕರಗಳಿಂದೆ
ನಸುವೆತ್ತಿ ಪಿಡಿದಿರುವ ನೀಲಬಣ್ಣದಿನೆಸೆವ
ಆ ನದಿಯ ನೀರುಡೆಯನಿರದೆ ಸೆಳೆದು
ಮೇಲೆ ನೀನಾಗಸದೆ ಜಗುಳಿ ಕೆಳಗಿಳಿಯುತಿರೆ
ಪಯಣ ಸಮನಿಪುದೆಂತು ನಿನಗೆ ಸಖನೆ!
ರುಚಿಯನರಿತಿಹ ರಸಿಕನಾವನೀ ಲೋಕದಲಿ
ವಿವೃತ ಜಘನೆಯನಂತು ತೊರೆಯಲಹನೊ!

೪೬

ನಿನ್ನ ಮಳೆವನಿಗಳಿಂ ಮೈಯುಬ್ಬಿ ನಾಂದಿಳೆಯು
ತನಿಸೊಗಡಿನೊಡವೆರೆದು ಕಮ್ಮಿತಾಗಿ
ಕಾಡಾನೆಗಳ ಬಳಗವಾನಂದದಿಂ ಮೂಸಿ
ಘೀಳಿಡುತೆ ಪೀರ್ವಂದು ಮಂದವಾಗಿ
ಕಾಡು ಅತ್ತಿಯ ಮರದ ಪಣ್ಗಳಂ ಗಳಿಯಿಸುತೆ
ಸುಳಿವಂದು ತಣ್ಣನೆಯ ಗಾಳಿಯಾಗಿ
ಮಂದ ಮಂದಾಗಮದ ಮಂದಾನಿಲಂ ಬೀಸಿ
ನಿನ್ನ ಕೊಂಡೊಯ್ಯುವನು ದೇವಗಿರಿಗೆ.

೪೭

ದೇವಗಿರಿಯಲಿ ಮತ್ತೆ ನಿತ್ಯಸನ್ನಿಹಿತನಹ
ಷಣ್ಮುಖಸ್ವಾಮಿಯನು ಕಾಣುವಂದು
ಹೂಮುಗಿಲವೋಲಿರುವ ಸೊಗದ ರೂಪವನಾಂತು
ವ್ಯೋಮಗಂಗಾಜಲದೊಳಾರ್ದ್ರಮಾದ
ಪುಷ್ಪಗಳ ಮಳೆಯಿಂದಲಾ ಕುಮಾರನ ಮಿಸಿಸು.
ವಾಸವನ ಸೇನೆಯನು ಕಾಯಲೆಂದು
ಚಂದ್ರಶೇಖರನಂದು ಅಗ್ನಿಮುಖದೊಳಗಿರಿಸಿ-
ದಾತನತ್ಯಾದಿತ್ಯ ತೇಜನಲ್ತೆ!

೪೮

ಕಾಂತಿರೇಖಾವಲಯ ವಿನ್ಯಾಸದಿಂದೆಸೆವ
ಕೆಳಗುದುರಿದಾ ನವಿಲುಗರಿಯನಾಯ್ತು
ಮಗನ ಮೋಹಮೊಳವನು ಗೌರಿಯಾದರದಿಂದೆ
ಕುವಲಯದ ದಳಮೊಡನೆ ಕಿವಿಯೊಳಿರಿಸೆ
ಶಿವನ ಶಶಿಕಲೆಯಿಂದ ಬೆಳ್ಪಡರ್ದಪಾಂಗವಿಹ
ಪಾವಕನ ವಾಹನವನಾ ಶಿಖಿಯನು
ಕುಣಿಸು ಮಾರ್ದನಿ ಕೊಡುವ ಪರ್ವತಾಗ್ರಮನೇರಿ
ಗುರುತರದ ಗರ್ಜನೆಯ ದನಿಗಳಿಂದೆ.

೪೯

ಇಂತು ಶರವಣಭವನ ಷಣ್ಮುಖನನರ್ಚಿಸುತೆ,
ಮಳೆಯ ತುಂತುರ್ವನಿಯು ಬೀಳ್ವುದೆಂದು
ಕರದೆ ವೀಣೆಗಳಿರುವ ಸಿದ್ಧಯುಗಳಗಳಂದು
ಭಯದಿಂದೆ ಹಿಂಜರಿದು ದಾರಿಬಿಡಲು ;
ಮುಂದುಮುಂದುತ್ತರಿಸಿ ಗೋಯಜ್ಞದಿಂದೊಗೆದು
ಸ್ರೋತರೂಪವನಾಂತು ಭೂಲೋಕದಿ
ರಂತಿದೇವನ ಕೀರ್ತಿ ತಾನೆಂಬ ತೆರನೆಸೆವ
ಚರ್ಮಣ್ವತೀನದಿಯು ಸನ್ಮಾನಿಸು.

೫೦

ಶ್ರೀಹರಿಯ ವೈಸಿರಿಯ ಕದಿವವೋಲಿಹ ನೀನು
ನೀರು ಕುಡಿವುದಕೆಂದು ಬಾಗಿದಂದು
ಹಿರಿದಾದರೂ ನೋಡೆ ದೂರವಿರುವುದರಿಂದೆ
ಕಿರಿದಾಗಿ ತೋರುತಿಹ ನದಿಯ ನೀರಂ ;
ನಡುವೆ ಒಂದೇ ಒಂದು ತೋರವಾಗಿರುವಂಥ
ಇಂದ್ರನೀಲದ ಮಣಿಯನಾಂತು ಎಸೆವ
ಭೂಮಿದೇವಿಯ ಕೊರಳ ಮಣಿಹಾರವೆಂದೆಣಿಸಿ
ಖೇಚರರು ನಿನ್ನನೊಲಿದೀಕ್ಷಿಸುವರು.

೫೧

ಆ ನದಿಯನುತ್ತರಿಸಿ ತೀರದ ಸೀನುತ್ತರಕೆ
ಬಳ್ಳಿ ಹುಬ್ಬಿನ ಹಾವಭಾವವನಿತು
ಕಣ್ಣೆವೆಯ ಹಾರಿಸುತೆ ಹೊಮ್ಮಿ ಹೊಳೆಯುವ ಕಂಪು
ಕಾಡಿಗೆಯು ತೆರನೆಸೆವ ಕಂಗಳಿಂದೆ
ಕುಂದಸುಮ ಚಲನಾನುಸಾರಿಯಹ ಮಧುಕರನ
ಕಾಂತಿಯನು ಅಪಹರಿಸುವಂತೆಸೆಯುವ
ದಶಪುರ ವಧೂಜನರ ನೇತ್ರಕೌತೂಹಲಕೆ
ನಿನ್ನಾತ್ಮ ಬಿಂಬವಂ ಪಾತ್ರವೆನಿಸು.

೫೨

ಬಳಿಕ ಬ್ರಹ್ಮಾವರ್ತನೆನುವ ಜನಪದವಿರುವು-
ದದನು ಛಾಯಾಮಾತ್ರದಿಂದಲ್ಲೈದಿ,
ನೀನು ಬಲ್ಮೊಳೆಗರೆದು ಸುರಿವ ಜಲಧಾರೆಯಲಿ
ಬಿರಿದ ನೀರೇಜಗಳ ಮುಸುರುವಂತೆ
ನಿಶಿತವಹ ನೂರಾರು ಬಾಣಗಳ ಮಳೆಗರೆದು
ನೃಪರ ಮುಖಕಮಲಗಳ ನರನುಮಂತೆ
ಮುನ್ನಂ ಕ್ಷಾತ್ರನ ಮೆರೆವ ರಣಭೂಮಿಯಾಗಿರುವ
ಆ ಕುರುಕ್ಷೇತ್ರವನು ಸಾರು ಮುಂದೆ.

೫೩

ತನ್ನ ಸತಿ ರೇವತಿಯ ಲೋಚನಾಂಕವನಾಂತ
ತನಗೆ ಅತಿಹಿತವಾದ ಸುರೆಯನುಳಿದು
ಬಾಂಧವರ ಮಮತೆಯಲಿ ಸಮರಭೂಮಿಯನುಳಿದು
ಬಲರಾಮನಾ ಸರಸ್ವತಿಯನೈದಿ
ಅದರ ಜಲಸೇವನೆಯೊಳೆಂದು ಶುಚಿಯಾದನೆನೆ
ಆ ಸರಸ್ವತಿನದಿಯ ಪುಣ್ಯಜಲವ
ನೀನುಮಾಸ್ವಾದಿಸುತೆ ಹೃದಯ ಶುದ್ಧಿಯ ಪಡೆದು
ವರ್ಣಮಾತ್ರದೆ ಕೃಷ್ಣನೆನಿಸು ಸಖನೆ.

೫೪

ಸಗರರಾಜಕುಮಾರರಂದು ದಿವನೇರಲಿರೆ
   ವಿರಚಿಸಿದ ಸೋಪಾನ ಪಂಕ್ತಿಯೆನುವ
ಗೌರಿದೇವಿಯ ಮುಖದ ಭ್ರುಕುಟಿರಚನೆಯನಿರದೆ
   ನೊರೆಯಿಂದೆ ನಗುವಂತೆ ತೋರುತಿರುವ
ಶಿರದ ಚಂದಿರನೊಡನೆ ಶಂಭುವಿನ ಕೇಶವನು
   ತೆರೆಗೈಗಳಿಂದೊತ್ತಿ ಪಿಡಿವೆಳೆಯುವ
ಕನಖಲದ ಸಾರೆಯೊಳು ಹಿಮಗಿರಿಯನಿಳಿದು ಬಹ
   ಜಾಹ್ನವಿಯ ಸುರನದಿಯ ನೋಡಲಿರುವೆ.

೫೫

ಪಿಮ್ಮೆಯ್ಯನಾಗಸದೊಳೂರಿ ಮುಮ್ಮೆಯ್ಯಿಂದೆ
   ಇಂದ್ರನೈರಾವತವ ಪೋಲ್ವ ತೆರದಿ
ತಿರುಗಿ ನದಿಗೆದುರಾಗಿ ಜಗುಳಿ ಕೆಳಮೊಗವಾಗಿ
   ನಿರ್ಮಲ ಸ್ಫಟಿಕದಂತೆಸೆಯುತಿರುವ
ಬೆಳ್ಪಿನಲ ಸುರನದಿಯ ನೀರ್ಗುಡಿಯಲೆಳಸುತಿರೆ
   ನಿನ್ನ ಕರಿಮೈ ನೆಳಲು ನೀರೊಳೊಗೆಯೆ
ಅಸ್ಥಾನದೊಳು ಯಮುನೆ ತನ್ನೊಡನೆ ಸೇರಿತೆನೆ
   ಗಂಗೆ ಕಣ್ಗೊಳಿಸುವಳು ಸುಭಗೆಯಾಗಿ.

೫೬

ಕುಳ್ಳಿರ್ದ ಕತ್ತುರಿಯ ಮಿಗಮದದ ಗಂಧದಿಂ
   ಘುಮಘುಮಿಪ ಶಿಲೆಗಳಿಹ ಕಂಪಿನೆಡೆಯ
ಹಿಮಸಮೂಹಗಳಿಂದೆ ಗೌರವರ್ಣಮನಾಂತ
   ಗಂಗೆಯುಗಮಿಸುತಿರುವ ತುಹಿನಗಿರಿಯ
ಸಾರಿ ನೀಂ ದಾರಿನಡೆದಲಸಿಕೆಯ ನೀಗಲೆಂ-
   ದಾ ಗಿರಿಯ ಶಿಖರದಲಿ ನೆಲಸಿದಂದು
ಅಚ್ಚ ಬೆಳ್ಪಿನೊಳೆಸೆವ ಹರನ ವಾಹನನಗೆದು
   ತಾಳ್ದ ಕೆಸರಿನಪೋಲು ಶೋಭಿಸಲಿಹೆ.

೫೭

ಬನಗಾಳಿ ಬೀಸುತಿರೆ ಸರಳ ತರುಶಾಖೆಗಳ
ಸಂಘರ್ಷದಿಂದೊಗೆದ ಕಿಡಿಗಳಿಂದೆ
ಚರಿಪ ಚಮರೀಮೃಗದ ವಾಲಭಾರಗಳುರಿಯೆ
ಕಾಳ್ಗಿಚ್ಚು ಹಿಮಗಿರಿಯ ಬಾಧಿಸುತಿರೆ
ಧಾರಾಸಹಸ್ರಗಳ ಸುರಿಸಿ ನೀನದನಂತೆ
ಸಂಪೂರ್ಣವೆನಲೊಡನೆ ತವಿಸಲೆಳಸು.
ಆರ್ತಜನರಾಪತ್ತನುಪಶಮನಗೊಳಿಸುವುದೆ
ಉತ್ತಮರ ಸಂಪತ್ತಿಗುಚಿತ ಫಲವು.

೫೮

ಸಿದ್ಧರಿಂದನವರತ ಬಲಿಹರಕೆಗೊಳ್ಳುತ್ತ
ಅಂದದಿಂದರೆಯೊಳಗೆ ಮೂಡಿ ನಿಂದ
ಅರ್ಧೇಂದು ಮೌಳಿಯಾ ಚರಣವಿನ್ಯಾಸವನು
ಭಕ್ತಿಯಲಿ ಬಲವಂದು ಬಾಗಿ ನಮಿಸು.
ಶ್ರದ್ಧಾತ್ಮರಾದವರು ಅದರ ದರ್ಶನದಿಂದೆ
ಪಾಪವೆಲ್ಲವ ಕಳೆದು ಪುಣ್ಯವಶದಿ
ದೇಹವಿದನುಳಿದಂದು ಶಾಶ್ವತದ ಗಣಪದವ
ಅಲ್ಲಿ ಕೈಲಾಸದಲಿ ಪಡೆವರಲ್ತೆ.

೫೯

ಅಲ್ಲಿ ಶರಭಗಳಿರದೆ ದೂರಸರಿಯುವ ನಿನ್ನ
ನೋಡಿ ಮದಗಜವೆಂದು ಭ್ರಮಿಸಿ ಬಂದು
ತಮ್ಮಂಗವನು ತಾವೆ ಭಂಗಗೊಳಿಸುವ ತೆರದಿ
ಕೋಪದಿಂದುರವಣಿಸಿ ಬೀಳುವಂದು
ಒಡನೆ ನೀಂ ತುಮುಲತರದಾಲಿಕಲ್ಮಳೆಗರೆದು
ಚದುರಿಸಾ ಶರಭಗಳ ದೂರದೆಸೆಗೆ.
ನಿಷ್ಫಲಾರಂಭಗಳಲುದ್ಯುಕ್ತನಾದವನು
ಪರಿಭವಕೆ ತಾನೆ ಗುರಿಯಾಗದಿರನೆ!

೬೦

ಸುಳಿವೆಳೆಯ ಗಾಳಿಯಲಿ ನಸನಳಿಸಿ ಬೆಳೆದಿರುವ
ವೇಣುವನವಿನಿದಾಗಿ ದನಿಗೈಯಲು
ಆ ದನಿಯನನುಸರಿಸಿ ಕಿನ್ನರಿಯರೊಲವಿನಿಂ
ತ್ರಿಪುರ ಜಯಗೀತೆಯನು ಹಾಡುತಿರಲು
ನಿನ್ನ ಮಧುರ ಧ್ವನಿಗಳಲ್ಲಿ ಕಂದರಗಳಲಿ
ಮುರಜದೊಲು ಮೃದುವಾಗಿ ಮೊಳಗುತಿರಲು
ಪಶುಪತಿಯ ನರ್ತನದ ಸಂಗೀತ ಸಾಧನಗ-
ಳಂದು ತಾಂ ಸಂಪೂರ್ಣಮೆನಿಸದಿರವೆ!

೬೧

ಹಿಮಗಿರಿಯ ಸಾನುವಿನ ಸುಂದರ ವಿಶೇಷಗಳ-
ನೀಕ್ಷಿಸುತೆ ನಲಿದು ನೀಂ ಮುಂದೆ ನಡೆದು
ಪರಶುರಾಮನ ಯಶವನಿಳೆಗೆ ಸಾರುತಲಿರುವ
ಹಂಸಂಗಳೊಳಪುಗುವ ಕ್ರೌಂಚ ಬಿಲದಿ
ಬಲಿಯ ನಿಯಮನಕೆಂದು ಜತನಗೈದಾ ಹರಿಯ
ಶ್ಯಾಮ ಚರಣನ್ಯಾಸವೆಂಬ ತೆರದಿ
ನಿನ್ನೊಡಲ ನಿಡಿದೆನಿಸಿ ತಿರುಗಿ ಅದರೊಳು ನುಸಿದು
ಉತ್ತರದ ದೆಸೆಗೆಂದು ತೆರಳು ಮುಂದೆ.

೬೨

ದಶಮುಖನ ಭುಜಬಲದ ಬಿಗಿದ ತೆಕ್ಕೆಯ ಭರಕೆ
ಜಗುಳಿ ಕಿಕ್ಕಿರಿದ ಗಿರಿ ಸಾನುವಿರುವ
ತ್ರಿದಶವನಿತಾಜನದ ದರ್ಪಣದ ತೆರನಿರುವ
ಕೈಲಾಸ ಪರ್ವತದ ಅತಿಥಿಯಾಗು.
ಕುಮುದದೊಲು ಬಿಳುಪಾದ ತುಂಗಶಿಖರಗಳಿರುವ
ಆಗಸವನಣೆದಿರುವ ಕೈಲಾಸವು
ದಿನದಿನವು ರಾಶಿಗೈದೀಶ್ವರನ ಸಿತಹಾಸ
ವೆಂಬತೆರನೆಸೆದು ಕಣ್ಗೊಳಿಸುತಿಹುದು.

೬೩

ಅದೆ ತಾನೆ ಕಡಿದಿರುವ ಗಜದಂತದಂಡದವಲಿ
ಅಚ್ಚ ಬೆಳ್ಪಿನೊಳೆಸೆವ ಧವಳಗಿರಿಯು
ಸುಣ್ಣನರೆದಂಜನದ ತೆರದೆ ಕರಿದ್ಯಾಗಿರುವ
ನೀನದರ ಸಾನುವನು ಸೇರಿದಂದು
ಗೌರಾಂಗನೆಂದೆನಿಸಿ ಶೋಭಿಸುವ ಹಲಧರನ
ಹೆಗಲಮೇಲೆಸೆವ ಕರಿವಸನದಂತೆ
ಎವೆಯುಲುಗದಂದದಲಿ ನಿನ್ನನವಲೋಕಿಸುವ
ಬೆಡಗಿನೊಂದಂದವನು ತಳೆವೆಯುತ್ತೆ !

೬೪

ಗೌರಿ ಹೆದರುವಳೆಂದೆ ಭುಜಗವಲಯವನುಳಿದು
ಶಂಭು ಕೈವಿಡಿದವಳ ನಡಸುವಂದು
ಕ್ರೀಡೆಗೆಂದಣೆಗೈದ ಕೈಲಾಸದೆಡೆಗಳಲಿ
ಪಾದಚಾರಿಣಿಯಾಗಿ ವಿಹರಿಸುತಿರೆ
ನೀನವರ ಮುಂದೋಡಿ ಜಲಕಣಗಳಿಲ್ಲವನು
ಘನಿಸಿರಿಸಿ ಮೆಟ್ಟಲುಗಳಿರವ ಪೋಲ್ತು
ರೂಪಾಂತರಂ ಪಡೆದು ವಿರಚಿಸೈ ದೇವಿಯರ
ಮಣಿತಟಾರೋಹಣಕೆ ಸೋಪಾನಮಂ.

೬೫.

ದೇವವನಿತೆಯರಲ್ಲಿ ಕನಕವಲಯಗಳಿಂದ-
ಲಿರಿಯುತಿರೆ ಜಲಧಾರೆ ಚಿಮ್ಮಿ ಸುರಿಯೆ
ಯಂತ್ರಧಾರಾಗೃಹದ ತೆರದೊಳಂತವರಂದು
ನಿನ್ನ ರೂಪಾಂತರಿಸಿ ನಲಿದು ಮಿಂದು
ಬಿಸಿಲ ಬೇಗೆಯು ಬವಣೆಗೊದಗಿಬಂದಿಹ ನಿನ್ನ-
ನಲ್ಲಿಂದ ತೆರಳಲಿರೆ ತಡೆಯುವಂದು
ಕೇಳೀನಿಮಗ್ನೆಯರವರ ನೀಂ ಭಯಗೊಳಿಸು
ಕರ್ಣಕರ್ಕಶವಾದ ಮೊಳಗನಿರಿದು !

೬೬

ಕನಕ ಕಮಲಗಳೊಗೆಗ ಮಾನಸ ಸರೋವರದ
ನೀರು ಮೊಗೆದಾಯುಸವ ಕಳೆದು ಜಲದ!
ಆ ವೇಳೆಗಲ್ಲಿರುವ ಇಂದ್ರನೈರಾವತನ
ನೆಳಲಗೌಸಣಿಗೆಯಲಿ ಸಂಸೇವಿಸಿ
ಮುಂದೆ ಕಲ್ಪದ್ರುಮದ ಕಿಸಲಯಾಂಶುಕಗಳನು
ಸಿನ್ನ ಗಾಳಿಯು ಬೀಸಿ ಚಲಿಸಿ ನಲಿಸಿ
ಇಂತು ನಾನಾ ತೆರನ ಲಲಿತ ಚೇಷ್ಟೆಗಳಿಂದ-
ಲಾ ನಗೇಂದ್ರನೊಳಲ್ಲಿ ನೆಲಸಿ ಸುಖಿಸು.

೬೭

ಪ್ರಿಯತಮನ ತೊಡೆಯಂತೆ ಕೈಲಾಸಸಾನುವಿರೆ
ಹರಿವ ಗಂಗೆಯೆ ಜಗುಳಿದುಡೆಯಾಗಿರೆ
ಅಲ್ಲಿ ಅಲಕೆಯ ನೋಡಿ ಕಾಮಚಾರಿಯೆ ಸಖನೆ
ಅದನು ಕಾಮಿನಿಯೆಂದು ಭಾವಿಸದಿರೆ!
ತುಂಗ ಸೌಧಗಳಿರುವ ಅಲಕೆ ಕಣ್ಗೊಳಿಸುವುದು
ನೀರ ಸುರಿಸುವ ಮುಗಿಲ ಧರಿಸಿದಂದು
ಹೊಳೆವ ಮುಂಗುರುಳಿನಲಿ ಮುತ್ತುಗಳ ಹಾರವನು
ತಳೆದು ಕಂಗೊಳಿಸುತಿರುವಿನಿಯಳಂತೆ!

ಉತ್ತರ ಮೇಘ

೧

ವಿದ್ಯುತ್ತಿನಂತೆಸೆವ ಲಲಿತವನಿತೆಯರಿಂದೆ
  ಇಂದ್ರಚಾಪದ ತೆರದ ಚಿತ್ರದಿಂದೆ
ಸ್ನಿಗ್ಧಗಂಭೀರತಾಘೋಷದಂದದಿ ಮೊರೆವ
  ನೃತ್ಯಗೀತಕೆ ನುಡಿವ ಮುರಜದಿಂದೆ
ನೀರ್ಮುಗಿಲ ತೆರನಿರುವ ಮಣಿವಿಮಾನಗಳಿಂದೆ
  ಅಭ್ರಚುಂಬಿಗಳಾದ ಶಿಖರದಿಂದೆ
ಸಹಧರ್ಮಗುಣಗಳಿಂದಂತಂತೆ ನಿನ್ನ ತಾಂ
  ಪೋಲ್ವ ಪ್ರಾಸಾದಂಗಳಿರುವುವಲ್ಲಿ.

೨

ಬಾಲಕುಂದದ ಸರವ ಮುಂಗುರುಳಿನಲಿ ಮುಡಿದು
  ಲೀಲೆಗೆನೆ ಕಮಲವನು ಕರದೆ ಪಿಡಿದು
ಲೋಧ್ರದೆಸಳಿನ ರಜದ ಲೇಪನದ ಹೊಗರೆಸೆವ
  ಪಾಂಡುವರ್ಣಶ್ರೀಯು ಮೊಗದೊಳಾಂತು
ಸುಂದರ ಶಿರೀಷವನು ಧರಿಸಿ ಕರ್ಣಂಗಳಲಿ
  ಕುರವಕದ ಹೊಸಹೂವ ಜಡೆಯೊಳಿರಿಸಿ
ನಿನ್ನ ಆಗಮನದಿಂದರಳಿದೆಳೆ ನೀಪಗಳ
  ಬೈತಲೆಯೊಳಿರಿಸಿರುವ ವಧುಗಳಿಹರು.

೩

ಆವಗಂ ಮದವೇರಿ ಮೊರೆಯುತಿಹ ದುಂಬಿಗಳಿ-
ನಾವಗಂ ಹೂಬಿಡುವ ತರುಗಳಿಂದೆ
ಆವಗಂ ಅರಸಂಚೆ ವಿರಚಿಸುವ ಕಾಂಚಿಯಿಂ-
ದಾವಗಂ ಪದ್ಮನಳಿನಂಗಳಿಂದೆ
ಆವಗಂ ಪೊಳೆಯುತಿಹ ಗರಿಗೆದರಿ ಕೊರಲೆತ್ತಿ
ಕೂಗುತಿಹ ಗೃಹಮಯೂರಂಗಳಿಂದೆ
ಆವಗಂ ಕತ್ತಲೆಯನೋಡಿಸುವ ಬೆಳದಿಂಗ-
ಳಿರುಳಿನಿಂ ರಮ್ಯವೆನಲೆಸೆವುದಲಕೆ.

೪

ಆನಂದದಿಂದಲ್ಲದನ್ಯಕಾರಣಗಳಿಗೆ
ಕಣ್ಣೀರು ಕರೆಯರಾ ಯಕ್ಷಜನರು.
ವಿಪ್ರಯೋಗದ ದುಃಖವಿರದು ವಿತ್ತೇಶರಿಗೆ
ಪ್ರಣಯಕಲಹವನುಳಿದು ಬೇರೆ ಕತದಿ.
ಇಷ್ಟಸಂಯೋಗದೊಳೆ ಪರಿಹರಿಸಬಹುದಾದ
ಕುಸುಮಶರ ಸಂಜನಿತ ತಾಪವುಳಿದು
ಅನ್ಯತಾಪಗಳಿಂದೆ ಪರಿತಪಿಸರವರಲ್ಲಿ.
ಯೌವನವನೊಂದನುಳಿದನ್ಯದಶೆಯಿಲ್ಲ.

೫

ತಾರೆಗಳ ಪಡಿನೆಳಲ ಕುಸುಮರಚಿತಗಳೆನಿಸಿ
ಮೆರೆವ ಸಿತಮಣಿಮಯದ ಹರ್ಮ್ಯಗಳಲಿ
ಉತ್ತಮ ಸ್ತ್ರೀಜನರ ಸಹವಾಸ ಸೌಖ್ಯದಲಿ
ಯಕ್ಷರಾನಂದದಲಿ ಮೋದವಡೆದು
ಗಂಭೀರ ಘೋಷದಲಿ ನಿನ್ನವೊಲು ದನಿಗುಡುತೆ
ಮೃದುವಾಗಿ ನುಡಿವ ಪುಷ್ಕರಗಳಿಂದೆ
ಕಲ್ಪವೃಕ್ಷಗಳಿಂದಲೊಗೆದ ರತಿಫಲವೆನುವ
ಮಧುವನಾಸ್ವಾದಿಸುವರಂದದಿಂದೆ.

೬

ಮಂದಾಕಿನೀನದಿಯ ಶೀತಳೋದಕದಿಂದೆ
ಸುಳಿವ ತಂಬೆಲರಿನಲಿ ಸೇವ್ಯರಾಗಿ
ದಡದೆಡೆಯ ಬೆಳೆದಿರುವ ಮಂದಾರವೃಕ್ಷಗಳ
ನೆಳಲಿನಾಸರೆಗಳಲಿ ಬೇಗೆ ನೀಗಿ
ಕನಕಸಿಕತದ ಮುಡಿಯ ಬಿಡಿಬಿಡಿಯನೆರಚಿ ತಾ-
ವದರೊಳಡಗಿರಿಸಿರುವ ಮಣಿಗಳಿಂದೆ
ಅಮರರುಮಪೇಕ್ಷಿಸುವ ಯಕ್ಷಕನ್ಯೆಯರಲ್ಲಿ
ಹುಡುಕುವಾಟವನಾಡಿ ನಲಿಯುತಿಹರು.

೭

ತೊಂಡೆಹಣ್ಣಿನ ತುಟಿಯ ಪ್ರಿಯತಮೆಯರುಟ್ಟಿರುವ
ರೇಸಿಮೆಯ ಸೀರೆಯನು ಸೆಳೆಯಲೆಂದು
ನೀವಿಯನು ಸಡಲಿಸುತೆ ರಾಗದಿಂ ಪ್ರಿಯರದನು
ಕಂಪಿಸುವ ಕೈಗಳಿಂದೆಳೆಯುವಂದು
ತುಂಗಕಿರಣವನೆಸೆದು ತನ್ನೆದುರೆ ತೊಳಗುತಿಹ
ರತ್ನಮಣಿದೀಪಗಳ ಕೆಡಿಸಲೆಂದು
ಹೇವದಿಂದಂಗನೆಯರೆರಚುತಿರೆ ಕುಂಕುಮದ
ವಿಫಲವಾಗುವುದವರ ಹಿಡಿಯ ಹುಡಿಯು.

೮

ಮೋಡಗಳ ತಡೆಹರಿದ ನಟ್ಟಿರುಳಿನಲಕೆಯಲಿ
ತೊಳಗುತಿಹ ಚಂದಿರನ ಕಿರಣದಿಂದೆ
ತಂತುಜಾಲದೊಳಿರುವ ಶಶಿಕಾಂತಮಣಿಮಾಲೆ
ಮಿಗಿಲು ಹನಿಹನಿಗರೆದು ಕರಗುತಿಳಿದು
ತಮ್ಮನೊಲಿದಪ್ಪಿರುವ ಪ್ರಿಯತಮರ ತೋಳುಗಳ
ಜಗುಳಿದಾಲಿಂಗನದೊಳೊರಗಿದಂಥ
ಅಲಕೆಯ ವಧೂಜನರ ರತಿಕೇಳಿಯಿಂದೊಗೆದ
ದೇಹದಾಯಾಸವನು ನೀಗುತಿಹುದು.

೯

ನಿನ್ನಂಥ ಮುಗಿಲುಗಳ ಮರುತನೋಡಿಸಿ ತಂಮ
ಅಲಕೆಯುಪ್ಪರಿಗೆಯೊಳು ತೂರಿವಂದು
ಹರ್ಮ್ಯಾಗ್ರಭೂಮಿಗಳ ಚಿತ್ರಿತಾಲೇಖಗಳ
ಜಲಕಣಗಳಿಂದಳಿಸಿ ದೋಷರೆನಿಸಿ
ಸಂಕೆತಟ್ಟಿದವೋಲು ಒಡನೆ ಅಲ್ಲಿಂದಿರದೆ
ಹೊಗೆ ಹೊರಗೆ ಹೊರಡುವುದನನುಕರಿಸುತೆ
ಅದರೊಳತಿ ನಿಪುಣರೆನೆ ನುಸುಳುವುವು ಮರೆಯಾಗಿ
ಜಾಲಂಧ್ರದಿಂದೆ ಝರ್ಝರಿತವಾಗಿ.

೧೦

ಒಳಮನೆಯೊಳವಿತಿರಿಸಿದಕ್ಷಯ್ಯನಿಧಿಗಳಿರೆ
ವಿಬುಧವನಿತೆಯರಾಗಿ ಹೆಸರುಗಳಿಸಿ
ಮೆರೆವ ಗಣಿಕಾಜನರ ಬಹುತೆರದ ಸರಸಗಳ
ಸಹವಾಸ ಸುಖಗಳಲಿ ಮುದಿತರೆನಿಸಿ
ಧನಪತಿಯ ಕೀರ್ತಿಯನು ಮೇಲ್ದನಿಯೊಳುಲಿಯುತಿಹ
ಸವಿಗೊರಲ ಕಿನ್ನರರ ಮೇಳದೊಡನೆ
ವಿಭ್ರಾಜವೆನುವ ಬಹಿರುಪವನವನನುಭವಿಸು-
ತನುದಿನವು ಸುಖಿಪರಾ ಕಾಮಿ ಜನರು.

೧೧

ಅಲಕದಿಂದುದುರಿರುವ ಮಂದಾರದರಳಿಂದೆ
ಮಕರಿಕಾಪತ್ರಗಳ ದಳಗಳಿಂದೆ
ಕಿವಿಗಳಿಂ ಜಗುಳಿರುವ ಕನಕ ಕಮಲಗಳಿಂದೆ
ಕಾಮಿನಿಯರಾತುರದೆ ನಡೆಯುವಂದು
ಕೊರಳ ಹಾರವು ಹರಿದು ದಾರದಿಂದುದುರಿರುವ
ಮುತ್ತುಗಳ ಸರದಿಂದೆ ಮಣಿಗಳಿಂದೆ
ನಿಶಿಯೊಳಭಿಸಾರಿಕೆಯರೊಲಿದು ಸುಳಿದಾ ದಾರಿ
ನೇಸರುದಯದೊಳರದೆ ಕಣ್ಣೆಸೆವುದು.

೧೨

ಅಲ್ಲಿ ಸಾಕ್ಷಾತ್ತಾಗಿ ಧನಪತಿಯು ಸಖನಾದ
ಮಹದೇವ ನೆಲಸಿರುವನೆಂದು ತಿಳಿದು
ಷಟ್ಪದನೆ ಮೌರ್ವಿಯೆನಲೆಸೆವ ಕೋದಂಡವನು
ಮನ್ಮಥನು ಭಯದಿಂದೆ ಧರಿಸನೆಂದುಂ.
ಕಾಮುಕರ ಗುರಿನೋಡಿ ತಪ್ಪದವರನು ಸೆಳೆವ
ಹುಬ್ಬುಗಂಟಿಕ್ಕಿರುವ ನೋಟವಿರುವ
ಚತುರ ವನಿತಾಜನರ ವಿಭ್ರಮ ವಿಲಾಸಗಳೆ
ಮನ್ಮಥಾರಂಭಗಳೆನಿಸಗುತಿಹವು.

೧೩

ಚಿತ್ರತರ ವಸನಗಳ ವಿಧವಿಧದ ತೊಡವುಗಳ
ಪುಷ್ಪಗಳ ಪತ್ರಗಳ ಕಿಸಲಯಗಳ
ವಿಭ್ರಮವನಕ್ಷಿಗಳಿಗುಪದೇಶಮಾಳ್ಪೊಂದು
ದಕ್ಷತೆಯನಾಂತಿರುವ ಮಧುರಸಗಳ
ಚರಣಕಮಲಂಗಳಿಗೆ ನ್ಯಾಸಯೋಗ್ಯಗಳಾದ
ಪ್ರೊಳೆವ ಲಾಕ್ಷಾರಸದ ಲೇಪನಗಳ
ರಮಣಿಯರಲಂಕಾರ ಸಾಧನಗಳೆಲ್ಲವನು
ಕಲ್ಪವೃಕ್ಷವದೊಂದೆ ಕೊಡುವುದಲ್ಲಿ.

೧೪

ಅಲ್ಲಿ ಧನಪತಿಯು ಗೃಹದುತ್ತರದೊಳಿನ್ನು ಮನೆ
ದೂರದೊಳೆ ತೋರುವುದು ಕಣ್ಸೆಯುತೆ
ಸುರಪತಿಯ ಧನುವಿನಂತತಿ ಚಾರುತರವಾದ
ಮಕರತೋರಣದಿಂದೆ ಮನಸೆಳೆಯುತೆ
ಅದರುಪಾಂತದೊಳಿಹುದು ಕೃತಕತನಯನತೆರೆದೊ-
ಳಿನ್ನು ಕಾಂತೆಯು ಮೋಹದಿಂದ ಬೆಳಸೆ
ಕೈಗೆ ನಿಲುಕುವ ತೆರದೆ ಪೂಗೊಂಚಲಿಂ ಬಾಗಿ
ನಿಂದೊಂದು ಬಾಲಮಂದಾರ ತರುವು.

೧೫

ಮರಕತದ ಶಿಲೆಗಳಲಿ ವಿರಚಿಸಿದ ಸೋಪಾನ-
ಮಾರ್ಗವಿಹ ವಾಪಿಯೊಂದಿರುವುದಲ್ಲಿ;
ರಮಣೀಯವೆನಲೆಸೆವ ವೈಡೂರ್ಯನಾಳಗಳ
ಕನಕ ಕಮಲಗಳಿಂದೆ ನಿಬಿಡವಾಗಿ.
ಆ ಕೊಳದ ನೀರಿನಲಿ ನೆಲಸಿರುವ ಹಂಸಗಳು
ನಿನ್ನ ನೋಡಿಯುಮಳಲನಿನಿಸಾನದೆ
ಸನಿಹದೊಳೆ ತೋರುವಾ ಮಾನಸವನಾಶಿಸದೆ
ಸೋತ್ಕಂಠೆಯಿಂದದನು ಸ್ಮರಿಸದಿಹವು.

೧೬

ಆ ಕೊಳದ ತೀರದೊಳೆ ಅತಿ ಮನೋಹರವಾದ
ಇಂದ್ರನೀಲದ ಮಣಿಯ ಶಿಖರವಿರುವ
ಕನಕ ಕದಳೀವನದ ವೇಷ್ಟನದೊಳೆಸೆಯುತಿಹ
ಕ್ರೀಡೆಗೆಂದಣಿಗೈದ ಶೈಲವಿಹುದು.
ಮಿಂಚಿನಂಚಿನೊಳೆಸೆದು ಮಿರುಗುತಿಹ ಹೇ ಸಖನೆ
ನಿನ್ನವೊಲೆ ತೋರುತಿಹ ಗಿರಿಯನದನು
ನನ್ನ ಗೇಹಿನಿಯೊಲಿದ ಪ್ರಿಯವಸ್ತುವೆಂದರಿತು
ಕಾತರದ ಚೇತನದೆ ಸ್ಮರಿಸುತಿಹೆನು.

೧೭

ಕುರವಕದ ಬೇಲಿಯೊಳಗಿರುವ ಮಾಧವಿಲತೆಯ
ಮಂಡಪದ ಸನಿಹವಿಹ ಮರಗಳಲ್ಲಿ
ಚಲಿಸುತಿಹ ಕಿಸಲಯಗಳೆಸೆವ ರಕ್ತಾಶೋಕೆ!
ಬಳಿಯೆ ರಾರಾಜಿಸುವ ಕೇಸರ ತರು!
ನನ್ನಂತೆ ಚೆನ್ನಸುಗೆ ಕಾತರಿಸುತಿಹುದಲ್ಲಿ
ನಿನ್ನ ಗೆಳತಿಯ ವಾಮಚರಣಕೆಳಸಿ.
ದೋಹದವ್ಯಾಜದಿಂದೆನ್ನವೊಲು ಬಯಸುತಿದೆ
ಕೇಸರವು ಸತಿಯ ಮುಖಮದಿರೆಗೆಳಸಿ.

೧೮

ಆವುಗಳಿರಡರ ನಡುವೆ ಅತಿ ಕಠೋರಗಳೆನಿಸ-
ವೆಳಿವಿದಿರ ತೆರನೆಸೆವ ಮಣಿಗಳಿಂದೆ
ನಿರ್ಮಿಸಿದ ಮರಕತದ ವೇದಿಕೆಯೊಳೆಸೆಯುತಿಪೆ
ಸ್ಫಟಿಕ ಫಲಕದ ಕನಕ ವಾಸಯಷ್ಟಿ.
ಸುಭಗಮೆನೆ ದನಿಗೈವ ಕೈಬಳೆಗಳಲುಗುತಿರೆ
ಕರದ ತಾಳಗಳಿಂದಲೆನ್ನ ಕಾಂತೆ
ನಿನಗೆ ಸಖನೆನಿಸಿರುವ ನೀಲಕಂಠನನಲ್ಲಿ
ಸಂಜೆಯಲಿ ತಾ ನಿಂದು ಕುಣಿಸುತಿಪಳು.

೧೯

ಇಂತು ನಾ ಹೇಳಿರುವ ಲಕ್ಷಣಗಳೆಲ್ಲವನು
ನಿನ್ನ ಮನದೊಳು ನೆನೆದು ಹೇ ಸಾಧುವೆ
ಬಾಗಿಲೊಳು ಬರೆದಿರುವ ಶಂಖ ಪದ್ಮಗಳಿಂದೆ
ತಿಳಿವದನು ನನ್ನ ಮನೆಯೆಂದು ಬಗೆದು
ನನ್ನ ವಿರಹದೊಳಿಂದು ಕಾಂತಿಗುಂದಿವವೋಲು
ಇರುವ ಮನೆಯದನೆನ್ನದೆಂದು ನೋಡು.
ನೇಸರುದಯಿಸದಂದು ತಾವರೆಯ ಹೂವರಳಿ
ತನ್ನ ಕಾಂತಿಯನೆಂತು ಹೊಮ್ಮಲಹುದು!

೨೦

ಅಲ್ಲಿ ನೀನಾತುರದೊಳೊಳಮನೆಯ ಪುಗುವಂದು
ಮರಿಯಾನೆಯಂದದಲಿ ರೂಪನಾಂತು
ಮೊದಲೆ ನಾಂ ಪೇಳಿದಾ ರಮ್ಯಸಾನುಗಳಿರುವ
ಕ್ರೀಡೆಗೆಂದಣಿಗೈದ ಶೈಲವೇರಿ
ಖದ್ಯೋತ ಪಙ್ಕ್ತಿಗಳ ವಿಲಸಿತಕೆ ಸಮನೆನಿಸಿ-
ದಲ್ಪಾಲ್ಪ ಭಾಸದಿಂ ಮಿಂಚನೆಸೆದು
ವಿದ್ಯುದುನ್ಮೇಷವೆನುವಾಲೋಕದಿಂದೆ ನೀ-
ನೊಳಮನೆಯೊಳೆಲ್ಲವನು ನೋಡಬಹುದು.

೨೧

ತನುವೆಯ್ಶ್ರೋಗರುಗುವ ನಡುಹಯುರವಂಗನೆ
ಸುಲಿಪಲ್ಲ ಸತಿ ಪಕ್ವಬಿಂಬಾಧರೆ
ಚಕಿತಹರಿಣಿಯ ತೆರದಿ ಚಪಲ ನೇತ್ರಾಲೋಕೆ
ನಿಮ್ನನಾಭಿಯು ಸುಂದರಿ ಕೃಶೋದರಿ
ಶ್ರೋಣೀಭರದ ಕತದೆ ಮಂದಗಾಮಿನಿಯೆನಿಸೆ
ಕುಚಭರದೆ ತಾನೀಷದವನತೆಯೆನೆ
ಅಲ್ಲಿರುವಳಿನ್ನ ಸತಿ ಯುವತಿಯರ ವಿಷಯದಲಿ
ಧಾತೃವಿನ ಮೊದಲನೆಯ ಸೃಷ್ಟಿಯಂತೆ.

೨೨

ಅವಳ ಸಹಚರನೆನಿಸಿದಾನಿಂತು ದೂರವಿರೆ
ಚಕ್ರವಾಕಿಯತೆರದೊಳೊಂಟಿಯಾಗಿ
ಪರಿಮಿತಾಲಾಪೆಯೆನೆ ಕೊರಗುವಬಲೆಯವಳ
ನನ್ನ ಎರಡನೆ ಜೀವವೆಂದು ಬಗೆಯೌ.
ಗುರುವಿರಹ ಭಾರದಲಿ ನಿಡಿದಾಗಿ ಸಾಗುವೀ
ಮುಳಿಯದಿನಗಳಲಾಕೆ ಬೇರೆ ರೂಪಿಂ
ಬಾಳೆ ಗಾಢೋತ್ಕಂಠೆ ಶಿಶಿರ ಪೀಡಿತಳಾದ
ಪದ್ಮಿನಿಯ ತೆರನಿರುವಳೆಂದರಿವೆನು.

೨೩

ಮತ್ತೆಮತ್ತಳುವಂದು ಅಳಲಿನುರುಬೇನೆಯಲಿ
ಊದಿಕೊಂಡಿರುವ ಕಣ್ಣೆವೆಗಳಿಂದೆ
ನಿಡಿದುಸಿರು ಬಿಡುವಂದು ಅದರ ಸೆಕೆಯುರಿಯಿಂದೆ
ಬಣ್ಣ ಕಳೆಗುಂದಿರುವ ತುಟಿಗಳಿಂದೆ
ಬೊಗಸೆಗ್ಗೈಗಳಲಾಂತ ಮೊಗದ ಮೇಲಿಂದಿಳಿದ
ಮುಂಗುರುಳು ಮರೆಯಲ್ಲಿ ನಸುತೋರುವ
ನನ್ನ ಇನಿಯಳ ಮೊಗವು ನಿನ್ನ ಉಪಸರಣದೊಳು
ಕಳೆಗುಂದಿದಿಂದುವೊಲು ದೀನವಹುದು.

೨೪

ನೀನವಳ ನೋಡುವಂದಾಕೆ ತಾನೆಂತಿಹಳೊ
ನಿನ್ನ ಕಣ್ಣಿಗೆ ರಮಣಿ ಬೀಳ್ಪಳೆಂತೊ!
ಬಲಿಪೂಜೆಗಳಲಿ ತಾನಾಸಕ್ತಳಾಗಿಹಳೊ
ನೇಮದಲಿ ಹರಕೆಗಳ ಸಲಿಸುತಿಹಳೊ!
ವಿರಹದೊಳು ಕೃಶವಾದ ನನ್ನ ಸಾದೃಶ್ಯವನು
ಭಾವಗೋಚರಮಾಗೆ ಬರೆಯುತಿಹಳೊ!
ಮಧುರವಚನವ ನುಡಿವ ಪಂಜರದ ಶಾರಿಕೆಯ
ಪತಿಯ ನೆನೆವೆಯ ಎಂದು ನುಡಿಸುತಿಹಳೊ!

೨೫

ಮಡದಿ ವೀಣೆಯ ಪಿಡಿದು ಮಲಿನವಸನಮನಾಂತ
ತೊಡೆಯ ಮೇಲದನಿರಿಸಿ ನೇವರಿಸುತೆ
ನನ್ನ ಹೆಸರಿರುವಂತೆ ಪದಗಳನು ಜೋಡಿಸಿದ
ಗೀತೆಯೊಂದನು ನೆನೆದು ಹಾಡಲೆಳಸಿ
ಸುರಿವ ಕಣ್ಣೀರಿನಲಿ ನಾಂದ ತಂತಿಗಳ ತಾ-
ನೆಂತೆಂತೊ ಶ್ರುತಿಗೊಳಿಸಿ ಮತ್ತೆ ಮಿಡಿದು
ತಾನೆ ವಿರಚಿಸಿದ ಪದಮಾದರುಂ ಸಲಸಲಕೆ
ಮೂರ್ಛನೆಯ ಮರೆವವಳ ನೋಡಲಿರುವೆ.

೨೬

ವಿರಹಕಾಲಾವಧಿಯೊಳಿನ್ನೀದುದೆನಿತೆಂದು
ತಿಂಗಳುಗಳೊಂದೊಂದನೆಣಿಸಲೆಂದು
ಹೊಸಿಲ ಮೇಲಿರಿಸಿರುವ ಹೂವುಗಳನೊಂದೊಂದ-
ನಾಯ್ದೆಣಿಸಿ ನೆಲದ ಮೇಲಿಡುತಿರುವಳೊ!
ಮನಸಿನೊಂದೂಹೆಯಲಿ ಮದನಲೀಲೆಯ ನೆನೆದು
ಸಂಭೋಗಸುಖವನನುಭವಿಸುತಿಹಳೊ!
ರಮಣರಗಲಿರುವಂದು ರಮಣಿಯರಿಗೀ ಬಗೆಯ
ಲೀಲೆಗಳೆ ಮೋದನೋಪಾಯಮಲ್ತೆ!

೨೭

ನಿನ್ನ ಸಖನರಸಿ ತಾನೀ ತೆರನೋಳಿರುವೆಂದು
ವಿರಹ ಪೀಡಿಸದವಳ ಹಗಲಿನಲ್ಲಿ.
ಅನುವೆ ರಾತ್ರಿಯ ವೇಳೆ ನಿಪ್ಪಿನೋದೆಯುನವಳ
ಗುರುವಿರಹಭಾರೆಯೆನೆ ಶಂಕಿಸುವೆನು.
ನಡುವಿರುಳಿನೊಳು ನೊಂದು ನಿದ್ರೆ ಬಾರದೆ ತೊಳಲು-
ವವನಿಶಯನೆಯ ಸತಿಯನಾ ಸಾಧ್ವಿಯ
ನನ್ನ ಸಂದೇಶವನು ನುಡಿದು ಸಲೆ ಸುಖಗೊಳಿಸೆ
ಸದ್ಮವಾತಾಯನದೊಳಿದ್ದು ನೋಡು.

೨೮

ಮನಮರುಗೆ ಮೈ ಸೊರಗಿ ವಿರಹಶಯನದೊಳೊರಗಿ
ಬಸವಳಿದು ಬೆಂಡಾಗಿ ಒಮ್ಮಗ್ಗುಲಾಗಿ
ಮೂಡಲಿನ ಮೂಲದಲಿ ಒಂದೆ ಕಳೆಯುಳಿದಿರುವ
ತಂಗದಿರನಂದದಲಿ ದೀನಳಾಗಿ
ನನ್ನೊಡನೆ ಮನತುಂಬಿ ರತಿಸುಖವನನುಭವಿಸಿ
ಕ್ಷಣದವೊಲು ಕಳೆದಂಥ ರಾತ್ರಿಯದನು
ವಿರಹದಿಂದತಿ ದೀರ್ಘವಾದುದೆನೆ ಭಾವಿಸುತೆ
ಬಿಸಿಯ ಕಣ್ಣೀರಿನಲಿ ಕಳೆಯುತಿಹಳು.

೨೯

ಜಾಲಮಾರ್ಗದಿನಿಳಿವ ಅಮೃತಶೀತಲಮೆನಿಸಿ-
ದಿಂದುವಿನ ಕಿರಣಗಳನೆಂದಿನವೊಲೆ
ಆನಂದವಹುದೆಂದು ಅರ್ತಿಯಿಂದೀಕ್ಷಿಸುತೆ
ಒಡನೆ ಕಡುಖೇದದಿಂ ಕಣ್ದೆರೆಹುತೆ
ಕಂಬನಿಯ ಭಾರದಲಿ ತೊಯ್ದು ಎವೆಗಳ ಮುಚ್ಚಿ
ಮೋಡವಾವರಿಸಿರುವ ಮಳೆಯ ದಿನದಿ
ತೆರೆದು ತೆರೆಯದವೋಲು ತೋರ್ಪ ನೆಲದಾವರೆಯ
ತೆರನಿರುವ ಸತಿಯ ನೀಂ ನೋಡಲಿರುವೆ.

೩೦

ಬರಿನೀರ ಮೀಹದಿಂದತಿ ಪರುಷವಾಗಿರುವ
ಮುಂಗುರುಳು, ಕೆನ್ನೆವರಮಿಳಿದು ಬರಲು
ಅಧರ ಕಿಸಲಯಗಳನು ಮಲಿನಗೊಳಿಸುತಲಿರುವ
ಬಿಸಿಯುಸಿರಿನಿಂದಲದನೋಸರಿಸುತೆ
ಸುರಿವ ಕಣ್ಣೀರಿನಲಿ ನಿದ್ರಾವಕಾಶವಿನಿ-
ಸಿಲ್ಲವೆಂದರಿತರೂ ಅದನೆ ಬಯಸಿ
ಕನಸಿನೊಳಗಾದರೂ ನನ್ನ ಸಂದರ್ಶನವ
ಪಡೆವುದೆಂತೆಂದವಳು ಚಿಂತಿಸುವಳು.

೩೧

ವಿರಹದಿವಸದ ಮೊದಲೆ ಆಕೆ ಹಾರವನುಳಿದು
ಆವ ಹೆರಳನು ತೆಗೆದು ಶಿಖೆಗೈದಳೊ
ಶಾಪ ಕೊನೆಗೊಂಡಂದು ಶೋಕವಿಗಳಿತನಾಗಿ
ಆವ ಶಿಖೆಯನು ನಾನು ಬಿಡಿಸಲಿಹೆನೊ
ಸಿಕ್ಕಾಗಿ ಜಡೆಗಟ್ಟಿ ಸೋಂಕಿದರೆ ಬಿರುಸಾಗಿ
ಜಗುಳಿ ಕದಪಿನ ಮೇಲೆ ಕವಿಯುತಿರುವ
ಏಕವೇಣಿಯನದನು ಅಯಮಿತನಖಂಗಳಿಂ-
ಸೆಳಸೆಳೆದು ತೆಗೆವವಳ ನೋಡಲಿರುವೆ.

೩೨

ಅಬಲೆ ಮನದಳಲಿನಿಂದೊಡವೆಗಳನೆಲ್ಲವನು
ಕಳಚಿಟ್ಟು ಕೃಶಳಾಗಿ ಬಳಲಿ ಬೆಂದು
ವಿರಹಶಯ್ಯೆಯ ಮೇಲೆ ಸಲಸಲಕೆ ಹೊರಳುವಳ
ಕೋಮಲಾಂಗಿಯನಿರದೆ ನೋಡಿದಂದು
ನೀನುಮಾಕೆಯ ಇರವಿಗೆದೆಗರಗಿ ಹೊಸಮಳೆಯ
ರೂಪದಲಿ ಕಣ್ಣೀರು ಕರೆಯಲಿರುವೆ.
ಆರ್ದ್ರಾಂತರಾತ್ಮರೆಂದೆನಿಸಿರುವ ಸರ್ವರೂ
ಕಾರುಣ್ಯ ವೃತ್ತಿಯನು ತೋರ್ಪರಲ್ತೆ.

೩೩

ನಿನ್ನ ಗೆಳತಿಯು ಮನವು ಕಟ್ಟೊಲ್ಮೆಯೆರಕದಿಂ-
ದೆನ್ನೊಳನುರಕ್ತವೆಂದರಿತಿರುವೆನು.
ಆದರಿಂದಲಿಂದಾನು ಇದೆ ಮೊದಲ ವಿರಹದೊಳು
ಅವಳಿಂತಿರುವಳೆಂದೂಹಿಸಿಹೆನು.
ಶುಭಗನಾನೆಂದೆನುವ ಬರಿಹೆಮ್ಮೆಯಿಂದೇನು
ಮಾತಾಳಿಯಂದದಲಿ ಬಣ್ಣಿಸಿದೆನೆ!
ಸೋದರನೆ ನಾನಿಂದು ಪೇಳಿರುವುದೆಲ್ಲಮುಂ
ಶೀಘ್ರದೊಳೆ ನಿನಗೆ ಪ್ರತ್ಯಕ್ಷಮಹುದು.

೩೪

ಮೊಗದ ಮೇಲಿಂದಿಳಿದು ಮುಂಗುರುಳು ಕವಿಯುತಿರೆ
ಕಡೆನೋಟ ಪಸರಿಸದೆ ಮುಸುಕಾಗಿರೆ
ಮಧುವ ಸೇವಿಸದಿರಲು ಭ್ರೂವಿಲಾಸಗಳಿರದೆ
ಕಾಡಿಗೆಯ ನುಣ್ಪಳಿಯೆ ಕಳೆಗುಂದಿರೆ
ನೀನು ಬಳಿಗೈದುವರೆ ಹಾರಿ ನಸುಚಲಿಸುತಿರೆ
ಆ ಮೃಗಾಕ್ಷಿಯ ವಾಮನಯನವದನು.
ಮೀನ ಚಾಲನವಡೆದ ಕುವಲಯಶ್ರೀಯೊಂದು
ಸಾಮ್ಯವನು ಪಡೆವುದೆಂದೂಹಿಸುವೆನು.

೩೫

ವಿಧಿವಶದೊಳಿಂದವಳನಗಲಿ ನಾಂ ದೂರವಿರೆ
ನನ್ನ ಬೆರಳುಗುರುಗಳ ಕಲೆಗಳಳಿಸಿ
ಚಿರಕಾಲದಿಂದಾಕೆ ತಳೆದ ಮಣಿಹಾರವನು
ದೈವಗತಿಯಿಂದದನುಮಂತೆ ತ್ಯಜಿಸಿ
ಕೂಟದಾಯಾಸವನು ಪರಿಹರಿಸಲೆಂದಾನು
ಕೈಗಳಿಂದೊತ್ತುವುದಕರ್ಹವೆನಿಸಿ
ಬೆಳೆದ ಬಾಳೆಯ ದಿಂಡಿನಂತೆ ಬೆಳ್ಪಿನೊಳೆಸೆವ
ನನ್ನವಳ ವಾಮೋರು ನಸುಚಲಿಪುದು.

೩೬

ಜಲದ ಹೇಳುವೆ ಕೇಳು ನೀನು ಹೋಗುವ ವೇಳೆ
ಮಲಗಿ ಜೊಂಪಿನೊಳಿರಲು ನನ್ನ ಸತಿಯು
ಸನಿಹದೊಳೆ ಕುಳ್ಳಿರ್ದು ನೀನವಳನನುಸರಿಸಿ
ಯಾಮಮಾತ್ರಂ ಸಹಿಸು ಮೊಳಗನುಳಿದು.
ತನ್ನ ಕನಸಿನೊಳಿರದೆ ಮನದಾಣ್ಮನೆನ್ನನೆಂ-
ತೋ ಪಡೆದು ಬಿಗಿದಪ್ಪಿ ನಲಿಯುತಿರಲು
ನನ್ನ ಕೊರಳನು ಸುತ್ತಿ ಬಿಗಿದ ಅವಳಪ್ಪುಗೆಯ
ಬಳ್ಳಿದೋಳಿನ ತೆಕ್ಕೆ ಜಾರದಿರಲಿ.

೩೭

ಹೊಚ್ಚಹೊಸಮಾಲತಿಯ ಬಿರಿಮುಗುಳ್ನೊಡನೊಡನೆ
ತಾನುಮಂತಸ್ತಾಪಶಮನೆಯಾಗೆ
ನಿನ್ನ ನೀರಿನ ಹನಿಯು ತಂಪೇರಿದೆಲರಿನಿಂ
ಮೃದುವಾಗಿ ಸುಳಿದವಳನೆಚ್ಚರಿಸಲು
ಸದ್ಮವಾತಾಯನದೆ ನಿಶ್ಚಲಾಕ್ಷಿಯನಿರಿಸಿ
ನೋಳ್ಪ ಮಾನಿನಿಯವಳ ನುಡಿಸಲೆಳಸಿ
ಮಿಂಚದೆಯೆ ಮುನ್ನಿಂತು ಧೈರ್ಯದಲಿ ನೀನಿಂತು
ಮೊಳಗುಗಳ ಮಾತುಗಳನಾರಂಭಿಸು.

೩೮

ಭರ್ತೃವಿನ ಮಿತ್ರನುಂ ಪ್ರಿಯನುಮಾದಂಬುವಾ-
ಹನನೆಂದು ತಿಳಿಯೆನ್ನ ಮುತ್ತೈದೆಯೆ!
ಅವನ ಸಂದೇಶವನು ನನ್ನ ಮನದೊಳಗಿರಿಸಿ
ಬಳಿಗೆ ಬಂದಿರುವೆನೆಂದೆನ್ನನರಿಯಾ!
ಅಬಲೆಯರ ಜಡೆಮುಡಿಯ ಬಿಡಿಸಲಾತುರರಾಗಿ
ದಾರಿಯಲಿ ತೊಳಲುವಾ ವಿರಹಿಗಳನು
ಮೃದುಮಧುರವಾಗಿರುವ ಮೊಳಗುಗಳ ಘೋಷದಿಂ-
ದಿರದೆ ತ್ವರೆಗೊಳಿಸುವಾ ಮುಗಿಲೆ ನಾನು.

೩೯

ಇಂತು ನೀನುಸುರುತಿರೆ ಪವನತನಯನ ಕಂಡ
ಮೈಥಿಲಿಯವೋಲಾಕೆ ಮೊಗವನೆತ್ತಿ
ಉತ್ಕಂಠವಶದಿಂದಲುಚ್ಛ್ವಸಿತ ಹೃದಯಳೆನೆ
ನಿನ್ನ ವೀಕ್ಷಿಸಿ ಸೊಗದೆ ಸಂಭಾವಿಸಿ
ಏಕೈಕಭಾವದಲಿ ಕೇಳುವಳದೆಲ್ಲವನು
ಪತಿಯ ನೇಹಿಗನೆಂದು ಪರಿಭಾವಿಸಿ.
ಸ್ನೇಹಿತರು ತಿಳಿಸುವಾ ಪತಿಯ ಕುಶಲದ ವಾರ್ತೆ
ಸಂಗಮದ ಸುಖಕಿಂತ ಕಿಂಚಿದೂನಂ.

೪೦

ನನ್ನ ವಚನವ ಸಲಿಸಿ ನೀನುಮುಪಕೃತನೆನಿಸೆ.
ಆಕೆಯೊಡನಿಂತುಸಿರು ದೀರ್ಘಾಯುವೆ!
ಅಬಲೆ ನಿನ್ನಿಂದಗಲಿದಳಲಿನುರು ಬೇನೆಯಲಿ
ರಾಮಗಿರ್ಯಾಶ್ರಮಂಗಳಲಿ ನೆಲಸಿ
ಉಸಿರು ಹಿಡಿದುಳಿದಿರುವ ನಿನ್ನ ಸಹಚರನಿಂದು
ಕುಶಲವೇ ನೀನೆಂದು ಕೇಳುತಿಹನು.
ಸುಲಭದೊಳಗಳಿವಂಥ ಜೀವಿಗಳ ಬೆಸಗೊಳ್ವು-
ದೀ ಬಗೆಯ ಮುನ್ನುಡಿಯೆ ಉಚಿತವಲ್ತೆ!

೪೧

ತನ್ನ ಮಾರ್ಗವ ತಡೆದು ತನಗೆ ವೈರಿವೊಲಿರುವ
ವಿಧಿವಶದೆ ದೂರವಿಹ ನಿನ್ನ ಪತಿಯು
ತೆಳುವಾಗಿ, ಕಡುತಾಪದಲಿ ಬೆಂದು, ನಿಡಿದುಸಿರು
ಬಿಡುತೆ; ಕಣ್ಣೀರಿನಲಿ ನಾಂದು ನೊಂದು ;
ಬಿಸಿಯುಸಿರು ಬಿಡುತಿರುವ ಪರಿತಾಪಗೊಳುತಿರುವ
ಕಡುನೊಂದು ಕಂಬನಿಯ ಕರೆಯುತಿರುವ
ಬಡವಾಗಿ ಸೊರಗಿರುವ ನಿನ್ನಂಗ ಸಂಗವನು
ತನ್ನ ಮನದೆಣಿಕೆಯೊಳೆ ಪೊಂದುತಿಹನು.

೪೨

ನೆರೆದ ಸಖಿಯರ ಇದಿರೊಳಿರುವ ನಿನ್ನನು ನೋಡಿ
  ಮೊಗಕೆ ಮುತ್ತಿಡುವೊಂದು ಆಸೆಯಿಂದೆ
ಎಲ್ಲರುಂ ಕೇಳ್ವಂತೆ ಪೇಳ್ವ ಮಾತಾದರ್ಥುಂ
  ಕಿವಿಯೊಳುಸುರಲು ಬಯಸಿದಂಥ ಪತಿಯು
ಶ್ರವಣವಿಷಯವ ಮೀರಿ ಲೋಚನಾತೀತನೆನೆ
  ದೂರದೇಶದೊಳಿಂದು ನಿಂತನೆಂದೆ
ನಿನ್ನೊಂದು ಮಮತೆಯಲಿ ಹೆಣೆದು ಸೇರಿಸಿದಂಥ
  ಪದವಿದನು ಪೇಳ್ದನಿಂತೆನ್ನ ಮುಖದೆ.

೪೩

ಶ್ಯಾಮಾಲತಾವಳಿಯೊಳಂಗದೊಂದಂದವನು
  ಮೊಗದೊಂದು ಕಾಂತಿಯನು ಚಂದಿರನೊಳು
ಚಕಿತವನಹರಿಣಿಯಾಲೋಕನದೆ ನೋಟವನು
  ತೆಳ್ವೊಳೆಯ ಅಲೆಗಳಲಿ ಹುಬ್ಬಿನೊಲವ
ಶಿಖಿಕಲಾಪಂಗಳಲಿ ಕುರುಳ ಸೌಂದರ್ಯವನು
  ನೋಡಿ ನಿನ್ನಂದವನು ಪರಿಭಾವಿಸಿ
ಒಂದೆಡೆಯೊಳಾದರುಂ ನಿನ್ನ ಸಾದೃಶ್ಯವನು
  ಕಾಣದೆಯೆ ಕೊರಗುತಿಹೆನೆಲೆ ಚಂಡಿಯೆ.

೪೪

ಹೊಸಮಳೆಯು ನೀರಿನಲಿ ನಾಂದಿರುವ ನೆಲದಂತೆ
  ಹೊಸದೊಂದು ಕಂಪುಗುವ ನಿನ್ನ ಮೊಗಕೆ
ದೂರವಿರುವುದರಿಂದೆ ಕೃಶನಾಗಿ ನವೆವೆನ್ನ
  ಪಂಚಬಾಣನುಮಿರದೆ ಪೀಡಿಸುವನು.
ವರ್ಷಋತುವಿನೊಳಿಂದು ದೆಸೆದೆಸೆಯನಾವರಿಸಿ
  ಸಾಂದ್ರಮೆನೆ ಕವಿದಿರುವ ಮೋಡದಿಂದೆ
ಅವ್ಯಕ್ತನಾಗಿರುವ ಸೂರ್ಯನಾತಪವಿರುವ
  ದಿವಸಗಳನಿನ್ನೆಂತು ಕಳೆವುದಬಲೆ.

೪೫

ಘಾತುರಾಗಗಳಿಂದೆ ಗಿರಿಯ ಶಿಲೆಗಳ ಮೇಲೆ
ಪ್ರಣಯಕುಪಿತಳವೋಲು ನಿನ್ನ ಬರೆದು
ನಿನ್ನ ಚರಣಾಗ್ರವಲಿ ಕೆಡೆದವನವೋಲೆನ್ನ
ಬರೆಯಲೆಂದಾಶಿಸಿದ ಆ ಕ್ಷಣದೊಳೆ
ಸಲಸಲಕೆ ಉರುಳಿ ಬರುವಶ್ರುಬಿಂದುಗಳಿಂದೆ
ಕಣ್ಣು ಹನಿಗೂಡುವುದು ನೋಟ ಮಸುಳೆ.
ಘಾತುಕ ಕೃತಾಂತನಾ ಚಿತ್ರದೊಳಗಾದರುಂ
ನಮ್ಮೊಂದು ಸಂಗವನು ಸಹಿಸನಲ್ತೆ!

೪೬

ಸ್ವಪ್ನಸಂದರ್ಶನದೊಳತಿಕಷ್ಟದಿಂದಾನು
ನಿನ್ನ ಸಹವಾಸವನು ಹೊಂದಿದಂದು
ನಿನ್ನ ಬಿಗಿದಪ್ಪುವೊಂದಾಸೆಯುಂದಾಗಸಕೆ
ಉದ್ವೇಗವಶನಾಗಿ ತೋಳನೆಸೆಯೆ
ಮತ್ತೆ ಮತ್ತೆನ್ನನಿಂತೀ ಸ್ಥಿತಿಯೊಳೀಕ್ಷಿಸುತೆ
ಬಳಿಯ ವನದೇವತೆಗಳೆನಗೆ ಮರುಗಿ
ಮರದ ಚಿಗುರೆಲೆ ಮೇಲೆ ತೋರಮುತ್ತಿನ ತೆರನ
ಕಣ್ಣೀರ ಹನಿಗಳನು ಸುರಿಸದಿಹರೆ!

೪೭

ದೇವದಾರುದ್ರುಮದ ಕಿಸಲಯದ ಕೊನೆಮುರಿದು
ಸುರಿವದರ ಹಾಲಿನೊಡವೆರೆದು ಬಂದು
ಅದುವೆ ಸೌರಭವೆರಸಿ ಆ ಹಿಮಾಚಲದಿಂದೆ
ದಕ್ಷಿಣಕೆ ಬೀಸುತಿರೆ ತಂಗಾಳಿಯು
ಕಲ್ಯಾಣಗುಣವತಿಯೆ ಮೊದಲು ನಿನ್ನಂಗವನು
ಸೋಂಕಿ ಬಳಿಕೀಯೆಡೆಗೆ ಬೀಸಿತೆಂದು
ಮನದೊಳಾಲೋಚಿಸುತಲಾನು ಮೈಯಾನುವೆನು
ಅಗಲಿಕೆಯ ಅಳಲಿನುರಿ ನೀಗಲೆಂದು.

೪೮

ದೀರ್ಘಯಾಮಗಳಿಂದಲುರುಳುತಿರುವೀ ರಾತ್ರಿ
ಕ್ಷಣದಂತೆ ಲಘುವೆನಿಸಿ ತೋರ್ಪುದೆಂತು!
ಅಂತೆ ಉರಿವೀ ಹಗಲುಮೆಲ್ಲ ವೇಳೆಯೊಳಿನಗೆ
ಮಂದಮಂದಾತಪದೊಳಿರ್ಪುದೆಂತು!
ಇಂತು ದುರ್ಲಭವಾದ ಕಾಮನೆಗಳಿಂದೆನ್ನ
ತಪ್ತಚೇತನವಿಂದು ಚಟುಲನಯನೆ!
ನಿನ್ನನಗಲಿದ ವ್ಯಥೆಯು ದಾರುಣಾವಸ್ಥೆಯುಳ್ಳು
ಕೊರಗುತಿದೆ ಶರಣರಿನ್ನಿಲ್ಲವೆಂದು.

೪೯

ಬಹುವಿಧದೆ ಚಿಂತಿಸುತೆ ನಾನೆ ನನ್ನಾತ್ಮವನು
ಸಂತವಿಸಿ ಜೀವವನು ಧರಿಸಿರುವೆನು.
ನನ್ನ ಕುಶಲವ ಕೇಳಿ ಇನ್ನಾದರೂ ನೀನು
ಕಾತರಂಗೊಳ್ಳದಿರು ಕಲ್ಯಾಣಿಯೆ!
ಅತ್ಯಂತ ಸುಖವಿರುವುದಾರಿಗೀ ಲೋಕದಲಿ
ಅತ್ಯಂತ ದುಃಖವಿನ್ನಾರಿಗಿಹುದು.
ಒಂದಾದ ಮೇಲೊಂದು ಸುಖದುಃಖಗಳು ಬಂದು
ಚಕ್ರನೇಮಿಕ್ರಮದೆ ಪೊರಳುತಿಹವು.

೫೦

ಶಾಪ ಕೊನೆಗೊಳ್ಳುವುದು ಶಾರ್ಙ್ಗಪಾಣಿಯು ತಾನು
ಭುಜಗಶಯನವನುಳಿದು ಏಳುವಂದು.
ಉಳಿದ ನಾಲ್ತಿಂಗಳನು ಕಣ್ಮುಚ್ಚಿ ಕಳೆಯುಬಳಿ
ಬಳಿಕ ನಾವೀರ್ವರೂ ಒಂದುಗೂಡಿ
ಶಾರದಾಕಾಶದಿಂದಿಳಿವ ಬೆಳ್ದಿಂಗಳಲಿ
ರಮಣೀಯಮೆನಲೆಸೆವ ರಾತ್ರಿಗಳಲಿ
ವಿರಹದೊಳು ಗುಣಿಸಿರುವ ನಂನಂಮ ಕಾಮಗಳ
ಮನಸಾರೆ ಸವಿಯುವಂ ಮೋದದಿಂದೆ.

೫೧

ಹಿಂದೊಮ್ಮೆ ಹಾಸಿನಲಿ ನನ್ನೊಡನೆ ನೀಂ ಮಲಗಿ
ನಿದ್ರಿಸಿದ ವೇಳೆಯಲಿ ಕೊರಳನಪ್ಪಿ
ನಿದ್ರೆಯೊಳೆ ನೀನೇಕೊ ಕೂಗಿ ರೋದಿಸುತಿರಲು
ಏನು ಕಾರಣವೆಂದು ನಿನ್ನನಂದು
ಬಹುವಿಧದೆ ಬೆಸಗೊಳ್ವ ನನ್ನೊಡನೆ "ಹೇ ಕಿತವ
ನೀನು ಮತ್ತಾವಳನೊ ರಮಿಸಿದಂತೆ
ಕನಸಾದುದೆನಗೆಂದು" ಮೊಗದ ಮಂದಸ್ಮಿತದೊ-
ಳೆಂದುದನು ಮತ್ತಿಂದು ನೆನೆದನವನು.

೫೨

ಇಂತಭಿಜ್ಞಾನವನು ಕಳುಹಿಸಿದ ಕಾರಣದೆ
ನನ್ನ ಕುಶಲವನರಿತು ಅಸಿತನಯನೆ!
ಲೋಕವಾರ್ತೆಯ ನಂಬಿ ನನ್ನೊಳನಿಮಿತ್ತದಿಂ
ನೀನವಿಶ್ವಾಸಿನಿಯಳೆನಿಸಬೇಡ!
ಸ್ನೇಹಧರ್ಮಗಳೆಂತೊ ವಿರಹಕಾಲದೊಳಿರದೆ
ನಶಿಸಿಹೋಗುವುದೆಂದು ಪೇಳುತಿಹರು.
ಭೋಗದ ಅಭಾವದಿಂದಿಷ್ಟವಿಷಯಂಗಳಲಿ
ರಸವುಕ್ಕಿ ಬೆಳೆವುದಾ ಪ್ರೇಮರಾಶಿ.

೫೩

ಪ್ರಥಮವಿರಹದೊಳಧಿಕಶೋಕವಿಹ್ವಲಳಾದ
ನಿನ್ನ ಸಖಿಯನು ಇಂತು ಸಂತವಿಸುತೆ
ವಿಷಮನೇತ್ರನ ವೃಷಭನಗೆದ ಶಿಖರಗಳಿರುವ
ಕೈಲಾಸದಿಂದೊಡನೆ ಹಿಂದಿರುಗುತೆ
ಆಕೆ ಕುರುಹುಗಳೊಡನೆ ಹೇಳಿಕಳುಹಿಸಿದಂಥ
ತನ್ನ ಕುಶಲದ ನುಡಿಯು ನನ್ನೊಳುಸುರಿ
ಉದಯಕಾಲದ ಕುಂದದರಳಂತೆ ಜಗುಳುತಿರು-
ವೆನ್ನ ಜೀವಿತವಿದನು ಬಂದುಳುಹಿಸು.

೫೪

ನಿನಗೆ ಸಖನಹ ನನ್ನ ಈಯೊಂದಪೇಕ್ಷೆಯನು
   ಕೈಕೊಂಡು ಸಲಿಸೆಯೆಂದಾಶಿಸುವೆನು.
ನಿನ್ನ ಪ್ರತ್ಯಾದೇಶವೊಂದರಿಂದಲೆ ನಾನು
   ಕಲ್ಪಿಸೆನು ಧೀರತೆಯ ನಿನ್ನೊಳೆಂದುಂ.
ನಿಶ್ಶಬ್ದನಾಗಿ ನೀಂ ಮಾರುತ್ತರಂಗುಡದೆ
   ಯಾಚಿಸುವ ಚಾತಕಕೆ ನೀರನೆರೆವೆ
ಸತ್ಪುರುಷರಾದರಿಗೆ ಈಪ್ಸಿತಾರ್ಥಕ್ರಿಯೆಯೆ
   ಪ್ರತ್ಯುತ್ತರಂ ಅಲ್ತೆ ಪ್ರಣಯಿಗಳಲಿ.

೫೫

ಗೆಳೆಯನಿವನೆಂದೆನುವ ಸೌಹಾರ್ದಭಾವದಿಂ-
   ದಲ್ಲದಿರೆ ವಿಧುರನೆಂದೆನುವ ಕತದೆ
ಕನಿಕರದೊಳೆಸಗು ನೀನೆನ್ನ ಪ್ರಿಯಕಾರ್ಯವನು
   ಅನುಚಿತವಿದೆಂಬುದನು ಪರಿಗಣಿಸದೆ.
ಇಷ್ಟಮಾದೆಡೆಗಳಲಿ ಬಳಿಕ ನೀಂ ಸಂಚರಿಸು
   ವರ್ಷಋತು ಸಂಭೃತಶ್ರೀಶನಾಗಿ.
ಕ್ಷಣಕಾಲಮಾದರುಂ ವಿದ್ಯುತ್ಕಳತ್ರದಿಂ
   ನಿನಗಿಂಥ ವಿರಹ ಸಂಘಟಿಸದಿರಲಿ.

★

ತುಮಕೂರು ಶ್ರೀ ಪಾಂಡುರಂಗ ಮುದ್ರಣಾಲಯದಲ್ಲಿ
ಮುದ್ರಿತವಾಗಿದೆ.

ಮಾರಾಟದ ಪೂರ್ಣಾಧಿಕಾರಿಗಳು :
ಮಿತ್ರ ಮತ್ತು ಕಂಪೆನಿ
ಪುಸ್ತಕ ವ್ಯಾಪಾರಿಗಳು
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್
ಮೈಸೂರು